ಅಧ್ಯಾಯ 11

# ಲಭ್ಯ ಮಾಹಿತಿಗಳ ವಿಶ್ಲೇಷಣೆ

1 ಪ್ರಸ್ತಾವನೆ
2 ದತ್ತಾಂಶದ ಕೊರತೆ
3 ದತ್ತಾಂಶ ಸಂಗ್ರಹ
4 ವಿಶ್ಲೇಷಣೆಯ ಎರಡು ವಿಭಾಗಗಳು
5 ಮೊಗವೀರ ಸಮಾಜದ ಹಿರಿಮೆ
6 ಬಹು ಘಟಕಗಳುಳ್ಳ ಸಂಘಟನೆಗಳು
7 ಸಮುದ್ರ ತೀರದ ವಾಸಸ್ಥಳ
8 ಅದ್ವಿತೀಯ ನ್ಯಾಯ ತೀರ್ಮಾನ ವ್ಯವಸ್ಥೆ
9 ಮೊಗವೀರರು ಸಹಕಾರಿ ಚಳುವಳಿಯ ಹರಿಕಾರರು
10 ಮೂಲದಿಂದಲೇ ಕರ ವಸೂಲಿ ಮೊಗವೀರರ ಬಳುವಳಿ (ಖಿಆಖ)
11 ಜೀವವಿಮೆ ಮತ್ತು ಪರಸ್ಪರ ಸಹಾಯ ಸಂಘಗಳು
12 ಕುಲಗುರು ಪರಂಪರೆ ಮತ್ತು ಗುರಿಕಾರ ಪದ್ಧತಿ
13 ಮೊಗವೀರರ ಮೂಲಸ್ಥಾನ
14 ಮೊಗವೀರ ಮಹಿಳಾ ಸಬಲೀಕರಣ
15 ಮುಂಬಾಯಿಗೆ ವಲಸೆ ಹೋದವರಲ್ಲಿ ಮೊಗವೀರರು ಮೊದಲಿಗರು
16 ಮೊಗವೀರ ಸ್ವಾತಂತ್ರ್ಯ ಸೇನಾನಿಗಳು ಮತ್ತು ಹುತಾತ್ಮರು
17 ಮೊಗವೀರ ಸಮಾಜದಲ್ಲಿ ಆಗಬೇಕಾದ ಸುಧಾರಣೆಗಳು
18 ಮೊಗವೀರ ವಾಸಸ್ಥಳಗಳು ಬರಿದಾಗುತ್ತಿವೆ
19 ಮೊಗವೀರ ಸಂಸ್ಕೃತಿಯ ರಕ್ಷಣೆ
20 ಮೊಗವೀರರ ಸಾಂಪ್ರದಾಯಿಕ ಸಂಘಟನೆಯಲ್ಲಿ ಬದಲಾವಣೆ
21 ಮೊಗವೀರ ಸಂಘ ಸಭೆಗಳ ವಿಭಿನ್ನ ಚೌಕಟ್ಟು
22 ಇತರ ಮೀನುಗಾರ ಜನಾಂಗಗಳೊಂದಿಗೆ ಸೇರ್ಪಡೆ
23 ಇತರ ಹಿಂದುಳಿದ ಸಮಾಜಗಳು
24 ಅಳಿಯ ಸಂತಾನ ಕಟ್ಟು
25 ಪ್ರಾಣಿ ಬಲಿ ಮತ್ತು ದೈವ ದರ್ಶನ
26 ಗುರುಕುಲ ಪರಂಪರೆ
27 ಗುರಿಕಾರ ಪದ್ಧತಿ
28 ಮೊಗವೀರರ ಧರ್ಮ ದತ್ತಿ ಸಂಘಟನೆಗಳು
29 ಮೊಗವೀರ ವಿದ್ಯಾರ್ಥಿ ನಿಲಯ ಮತ್ತು ಯುವಜನರ ವಸತಿಗೃಹ

# ಲಭ್ಯ ಮಾಹಿತಿಗಳ ವಿಶ್ಲೇಷಣೆ

**ಪ್ರಸ್ತಾಪನೆ**

ಹಿಂದಿನ ಅಧ್ಯಾಯಗಳಲ್ಲಿ ಲಭ್ಯ ಮಾಹಿತಿಗಳನ್ನು ಮಾತ್ರ ಕೊಡಲಾಗಿದೆ. ಲಭ್ಯ ಮಾಹಿತಿಗಳ ವಿಶ್ಲೇಷಣೆ ಇರಲಿಲ್ಲ. ಈ ಅಧ್ಯಾಯದಲ್ಲಿ ಕೆಲವು ಆಯ್ದ ವಿಷಯಗಳ ಮೇಲೆ ಟಿಪ್ಪಣಿ ಕೊಡಲಾಗಿದೆ. ಇದು ಲೇಖಕನ ವೈಯಕ್ತಿಕ ಅಭಿಪ್ರಾಯ. ಈ ಟಿಪ್ಪಣಿಯನ್ನು ವಿಸ್ತರಿಸಲು ವಿಪುಲ ಅವಕಾಶಗಳಿವೆ.

**ದತ್ತಾಂಶಗಳ ಕೊರತೆ**

ನಮ್ಮ ಪೂರ್ವಜರು ಮಾಹಿತಿಯನ್ನು ಬರೆದಿಡುವಷ್ಟು ವಿದ್ಯಾವಂತರಾಗಿರಲಿಲ್ಲ. ಸಾಕಷ್ಟು ವಿದ್ಯಾಭ್ಯಾಸ ಮಾಡಿದ ಆನಂತರದ ವಿದ್ಯಾವಂತ ಪೀಳಿಗೆ ಮೊಗವೀರ ಸಮಾಜದ ಬಗ್ಗೆ ಬರೆದಿಡುವ ಪ್ರಯತ್ನ ಮಾಡಿಲ್ಲ. ಈಗಲೂ ನಮ್ಮ ಮೊಗವೀರ ಗ್ರಾಮಗಳಲ್ಲಿ, ಕೂಡಿಗೆಯಲ್ಲಿ ಮತ್ತು ಇತರ ಗ್ರಾಮಗಳಲ್ಲಿ ವಾಸಿಸುವ ಮೊಗವೀರರ ಜನಸಂಖ್ಯೆ, ಉದ್ಯೋಗ, ಆರ್ಥಿಕ ಪರಿಸ್ಥಿತಿ ಮತ್ತು ಮೊಗವೀರರು ಕಟ್ಟಿದ ಸಂಘ/ ಸಂಸ್ಥೆಗಳ ಸವಿಸ್ತಾರವಾದ ದತ್ತಾಂಶ ಲಭ್ಯವಿಲ್ಲ. ಇಂತಹ ಅಪೂರ್ಣ ಮಾಹಿತಿಯ ಆಧಾರದಿಂದ ಮೊಗವೀರ ಸಮಾಜದ ವಿಶ್ಲೇಷಣೆ ಮಾಡುವುದು ಕಷ್ಟ ಸಾಧ್ಯ. ಕನಿಷ್ಟ ಮಾಹಿತಿಯ ಆಧಾರದಿಂದ ವಿಶ್ಲೇಷಣೆ ಮಾಡುವುದು, ವಿಶ್ಲೇಷಣೆ ಮಾಡದಿರುವುದಕ್ಕಿಂತ ಒಳ್ಳೆಯದೆಂಬ ಅಭಿಪ್ರಾಯದಿಂದ ಈ ಪ್ರಯತ್ನ ಮಾಡುತ್ತಿದ್ದೇನೆ.

**ದತ್ತಾಂಶ ಸಂಗ್ರಹಣೆ**

ಮೊತ್ತ ಮೊದಲು 353 ಮೊಗವೀರ ಗ್ರಾಮಸಭೆಗಳು ಮತ್ತು ಕೂಡಿಗೆಗಳಲ್ಲಿ ವಾಸಿಸುವ ಮೊಗವೀರರ ಮೂಲಭೂತ ಮಾಹಿತಿ ಸಂಗ್ರಹ ಅಗತ್ಯವಿದೆ. ಆನಂತರ, ಕರ್ನಾಟಕ, ಮಹಾರಾಷ್ಟ್ರ ಹಾಗೂ ದೇಶ ವಿದೇಶಗಳಲ್ಲಿ ವಾಸಿಸುವ ಮೊಗವೀರರ ಮೂಲಭೂತ ವಿವರ ಸಂಗ್ರಹ ಮಾಡುವುದು ಉತ್ತಮ. ಮುಂಬಯಿ ನಗರ ಸಭೆ ಕೂಡಿದ ಮುಂಬಯಿ ಪ್ರದೇಶದ (ಒಒಖಆಂ)ಯಲ್ಲಿ ವಾಸಿಸುವ ಮೊಗವೀರರು ಬಹಳ ಸಂಖ್ಯೆಯಲ್ಲಿದ್ದಾರೆ. ಇದಕ್ಕಾಗಿ "ಮೊಗವೀರರ ನಿವಾಸ ಸ್ಥಳಗಳು" ಎಂಬ ಅಧ್ಯಾಯವನ್ನು ನೋಡಿದರೆ ಒಳ್ಳೆಯದು. ಕರ್ನಾಟಕ ಕರಾವಳಿಯ ನಂತರ, ಮೊಗವೀರರ ಬಹು ದೊಡ್ಡ ಸಂಖ್ಯೆಯಲ್ಲಿ ಮುಂಬಾಯಿ ನಗರದ ಮತ್ತು ನಗರದ ಆಸುಪಾಸಿನಲ್ಲಿ ವಾಸಿಸುತ್ತಿದ್ದಾರೆ. ಒಮ್ಮೆ ಮೂಲಭೂತ ದತ್ತಾಂಶ ಸಂಗ್ರಹವಾದರೆ, ಇದರ ಆಧಾರದ ಮೇಲೆ ಸಮಗ್ರ ದತ್ತಾಂಶ ಸಂಗ್ರಹಕ್ಕಾಗಿ ಮೊಗವೀರ ಜನಗಣತಿ ಮಾಡಬಹುದು.

**ವಿಶ್ಲೇಷಣೆಯ ಎರಡು ಪ್ರಮುಖ ವಿಭಾಗಗಳು**

ಮೊಗವೀರ ಸಮಾಜದ ಮಾಹಿತಿ ಸಂಗ್ರಹಿಸಿ ಅಧ್ಯಯನ ಮಾಡಿದಾಗ, ಒಂದನೆಯದಾಗಿ ಮೊಗವೀರ ಸಮಾಜದ ಹಿರಿಮೆ (ಹೆಮ್ಮೆಯ ವಿಷಯ) ಮತ್ತು ಎರಡನೆಯದಾಗಿ ಮೊಗವೀರ ಸಮಾಜದಲ್ಲಾಗಬೇಕಾದ ಬದಲಾವಣೆಗಳ (ಸುಧಾರಣೆ) ಬಗ್ಗೆ ವಿವರಿಸುವ ಅಗತ್ಯ ಕಂಡು ಬಂದಿದೆ. ಪ್ರಥಮತ: 'ಮೊಗವೀರರ ಸಮಾಜದ ಹಿರಿಮೆ' ಮತ್ತು ಆನಂತರ 'ಮೊಗವೀರ ಸಮಾಜ ಸುಧಾರಣೆ'ಯ ಬಗ್ಗೆ ವಿವರಿಸಲಾಗಿದೆ

**ಮೊಗವೀರ ಸಮಾಜದ ಹಿರಿಮೆ**

ಮೊಗವೀರ ಸಮಾಜದ ಮಾಹಿತಿ ಸಂಗ್ರಹಿಸಿ ಅಧ್ಯಯನ ಮಾಡಿದಾಗ ಮೊಗವೀರರು ಹೆಮ್ಮೆಪಡಬಹುದಾದ ಕೆಲವು ವಿಷಯಗಳು ಬೆಳಕಿಗೆ ಬಂದಿವೆ. ಅದರಲ್ಲಿ ಪ್ರಮುಖ ವಿಷಯಗಳನ್ನು ಆಯ್ದು ವಿವರಿಸುವ ಪ್ರಯತ್ನ ಮಾಡುತ್ತಿದ್ದೇನೆ.

**ಬಹು ಘಟಕಗಳುಳ್ಳ ಸಂಘಟನೆಗಳು**

ಮೊಗವೀರ ಸಮಾಜದ 353 ಮೊಗವೀರ ಗ್ರಾಮಸಭೆಗಳು ಮತ್ತು ಕೂಡಿಗೆಗಳು ಸಾಧಾರಣ ಹದಿನೈದು ಮೊಗವೀರ ಸಂಯುಕ್ತ ಪಟ್ಣ ಸಭೆಗಳು, ಮೂರು ಮೊಗವೀರ ಹೋಬಳಿಗಳು ಮತ್ತು ಎರಡು ಮೊಗವೀರ ಶೃಂಗ ಸಭೆಗಳಾಗಿ ಸಂಘಟನೆಗೊಂಡಿರುವ ವಿವರ 'ಮೊಗವೀರ ಸಂಘಟನೆಗಳು' ಎಂಬ ಅಧ್ಯಾಯದಲ್ಲಿ ಮತ್ತು "ಅನುಬಂಧ" ಎಂಬ ಅಧ್ಯಾಯದ "ಅನುಬಂಧ-1" ಎಂಬ ವಿಭಾಗದಲ್ಲಿ ಲಭ್ಯವಿದೆ. ಇಂತಹ ವ್ಯವಸ್ಥಿತ ಬಹು ಸಂಘಟನೆಯು ಇತರ ಯಾವ ಸಮಾಜದಲ್ಲಿಯೂ ಇಲ್ಲವೆಂದರೆ ಅತಿಶಯೋಕ್ತಿಯಾಗಲಾರದು.

**ಸಮುದ್ರ ತೀರದ ವಾಸಸ್ಥಳ**

ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲೂಕು ಮತ್ತು ಉಡುಪಿ ಜಿಲ್ಲೆಯ ಉಡುಪಿ ತಾಲೂಕು ಮತ್ತು ಕುಂದಾಪುರ ತಾಲೂಕುಗಳು  ಸಾಧಾರಣ ನೂರಿಪ್ಪತ್ತು ಕಿಲೋ ಮೀಟರ್ ಉದ್ದದವರೆಗೆ ಮೊಗವೀರ ಗ್ರಾಮ ಸಭೆಗಳು/ಕೂಡಿಗೆಗಳು ಸಮುದ್ರ ಬದಿಯಲ್ಲಿವೆ. ಇಂತಹ ಅದ್ವಿತೀಯ ವಾಸಸ್ಥಳ ಮೊಗವೀರರಿಗಲ್ಲದೆ ಇತರ ಸಮಾಜದ ಪಾಲಿಗೆ ಲಭ್ಯವಿಲ್ಲವೆಂದು ಹೇಳಬೇಕಾಗಿದೆ.

**ಅದ್ವಿತೀಯ ನ್ಯಾಯ ತೀರ್ಮಾನ ವ್ಯವಸ್ಥೆ**

ಸಾಮಾನ್ಯವಾಗಿ, ಎಲ್ಲಾ ಮೂಲ ನಿವಾಸಿ ಕೂಡುಕಟ್ಟುಗಳಲ್ಲಿ ಆಂತರಿಕ ನ್ಯಾಯ ತೀರ್ಮಾನ ವ್ಯವಸ್ಥೆ ಇರುವುದು ಸಹಜ. ಆದರೆ, ಹೆಚ್ಚಿನ ಓದು ಬರಹವಿಲ್ಲದ ನಮ್ಮ ಮೊಗವೀರ ಪೂರ್ವಜರು ಅವರದೇ ಆದ, ಇಂದಿನ ಪೀಳಿಗೆಗೆ ಮಾರ್ಗದರ್ಶಿಯಾಗಬಲ್ಲ, ನ್ಯಾಯ ತೀರ್ಮಾನದ ಅನುಕರಣೀಯ ಚೌಕಟ್ಟುಗಳನ್ನು ರಚಿಸಿದ್ದರು. ಇಂತಹ ವ್ಯವಸ್ಥೆಯಲ್ಲಿ, ಮೊದಲ ಹಂತದಲ್ಲಿ ಸದಸ್ಯರೊಳಗಿನ ವ್ಯಾಜ್ಯವನ್ನು ಮೊಗವೀರ ಗ್ರಾಮಸಭೆಯಲ್ಲಿ ಪರಿಹರಿಸಲ್ಪಡುತ್ತದೆ. ಆನಂತರ, ಯಾವುದೇ ಒಂದು ಪಕ್ಷಕ್ಕೆ ಗ್ರಾಮಸಭೆಯ ತೀರ್ಮಾನ ನ್ಯಾಯ ಸಮ್ಮತವಾಗಿಲ್ಲವೆಂದು ಅನಿಸಿದರೆ, ಅವರು ಮೊಗವೀರ ಸಂಯುಕ್ತ ಪಟ್ಣ ಸಭೆಗೆ ಮೇಲರ್ಜಿ ಕೊಡಬಹುದು. ಸಂಯುಕ್ತ ಪಟ್ಣ ಸಭೆಯ ತೀರ್ಮಾನ ತೃಪ್ತಿಕರವಾಗದಿದ್ದರೆ, ಮೊಗವೀರ ಹೋಬಳಿ ಸಭೆಗೆ, ನ್ಯಾಯ ತೀರ್ಮಾನಕ್ಕಾಗಿ ಪುನಃ ಮೇಲರ್ಜಿ ಕೊಡಬಹುದು. ಹೋಬಳಿ ಸಭೆಯ ತೀರ್ಮಾನ ಒಪ್ಪಿಗೆಯಾಗದಿದ್ದಲ್ಲಿ, ಕೊನೆಯದಾಗಿ ದಯಾ ಭಿಕ್ಷೆಯ ಮನವಿಯನ್ನು ಮೊಗವೀರರ ಕುಲಗುರುಗ'ಳ ತೀರ್ಮಾನಕ್ಕಾಗಿ ಕಳುಹಿಸಬಹುದು. ಬೆಣ್ಣೆಕುದ್ರು ಶ್ರೀ ಕುಲಮಹಾಸ್ತ್ರೀ ಅಮ್ಮನವರ ದೇವಸ್ಥಾನದಲ್ಲಿ ಕುಲಗುರುಗಳು, ವಾದಿ ಪ್ರತಿವಾದಿಗಳ ಹೇಳಿಕೆಯನ್ನು ಆಲಿಸಿ, ಕೊಡುವ ತೀರ್ಮಾನ ಅಂತಿಮ ನಿರ್ಣಯವೆಂದು ಮೊಗವೀರ ಸಮಾಜದ ಭಾಂದವರು ಸ್ವೀಕರಿಸುತ್ತಿದ್ದರು. ಆದರೆ ಕುಲಗುರುಗಳ ಅನುಪಸ್ಥಿತಿಯಲ್ಲಿ, ಶೃಂಗ ಸಭೆಯಾದ ಮೊಗವೀರ ಮಹಾಜನ ಸಂಘದ ತೀರ್ಮಾನ, ಅಂತಿಮ ತೀರ್ಮಾನವೆಂದು ಪರಿಗಣಿಸಲಾಗುತ್ತದೆ. ಸುಸಜ್ಜಿತ ನ್ಯಾಯ ತೀರ್ಮಾನಕ್ಕಾಗಿ, ವಾದಿ ಪ್ರತಿವಾದಿಗಳ ಹೇಳಿಕೆ, ಸಾಕ್ಷಿದಾರರ ಹೇಳಿಕೆ ಮತ್ತು ಕೆಲವು ಸಲ ಬರಹಮೂಲಕದ ಹೇಳಿಕೆ ಇತ್ಯಾದಿಗಳನ್ನು ಪರಿಗಣಿಸುವ ಪದ್ಧತಿಯಿತ್ತು. ಇಂತಹ ಸುವ್ಯವಸ್ಥಿತ ನ್ಯಾಯ ತೀರ್ಮಾನ ಪದ್ಧತಿ ಇತರ ಸಮಾಜದಲ್ಲಿ ಇರಲಿಲ್ಲವೆಂದು ತಿಳಿದು ಬಂದಿದೆ.

**ಮೊಗವೀರರು ಸಹಕಾರ ಚಳುವಳಿಯ ಹರಿಕಾರರು**

ಮೊಗವೀರರ ಮೀನುಗಾರಿಕೆಯ ವಿಧಾನಗಳಾದ 'ಪಟ್ಟೆ ಬಲೆ', 'ವೈಬಲೆ', 'ರಂಪಣಿ' ಮತ್ತು 'ಕೈರಂಪಣಿ'ಗಳಲ್ಲಿ ದುಡಿಯುವ ಮೊಗವೀರರು, ಸಹಕಾರಿ ಸೂತ್ರದಂತೆ, ಎಲ್ಲರೂ ಸಹ-ಮಾಲಕರು ಮತ್ತು ಸಂಪಾದನೆಯಲ್ಲಿ ಸಮಪಾಲು ಸಿಗುತ್ತಿತ್ತು. ಆದರೆ, ವೈ ಬಲೆಯವರು ಈ ಸಹಕಾರಿ ತತ್ವವನ್ನು ಇನ್ನೊಂದು ಮಜಲಿಗೆ ಏರಿಸಿದ್ದರು. ವೈಬಲೆಯ ಒಂದು ಜೋಡಿ (ಎರಡು ದೋಣಿಗಳ ಒಂದು ಫಂಡು) ಒಂದು ಸಹಕಾರಿ ಸಂಘವಾದರೆ, ಅಂತಹ ಅಕ್ಕ ಪಕ್ಕದ ಹಲವು ವೈಬಲೆ ಜೋಡಿಗಳು (ಫಂಡುಗಳು) ಸೇರಿ ಒಂದು 'ಸಹಕಾರಿ ಸಮೂಹ ಸಂಘಟನೆ'ಯನ್ನು ಸ್ಥಾಪಿಸಿದರು. ವೈಬಲೆಯ ಮೀನುಗಾರಿಕೆಯಿಂದ ಆದ ಆದಾಯವನ್ನು ಪ್ರಥಮತಃ ಸಹಕಾರಿ ಸಮೂಹದ ಜೋಡಿಗಳಿಗೆ ಹಂಚಿ, ಆಮೇಲೆ ಜೋಡಿಯ ಪಾಲಿಗೆ ಬಂದ ಆದಾಯವನ್ನು ವೈಬಲೆ ಜೋಡಿಯ ಸಹ-ಮಾಲಿಕರು ಹಂಚಿಕೊಳ್ಳುತ್ತಿದ್ದರು. ಇಂತಹ ಸಹಕಾರಿ ತತ್ವದಂತೆ ನಡೆಯುವ ಮೊಗವೀರರ ಮೀನುಗಾರಿಕೆಯ ಸಹಕಾರಿ ಸಂಘಗಳು ಮತ್ತು ಸಹಕಾರಿ ಸಮುದಾಯ ಸಂಘಗಳು ಬ್ರಿಟಿಷರು ಸಹಕಾರಿ ಪದ್ಧತಿಯನ್ನು ಕಾನೂನು ಮೂಲಕ ಭಾರತ ದೇಶದಲ್ಲಿ ಜಾರಿ ಮಾಡುವುದಕ್ಕೆ ಮೊದಲೇ, ಮೊಗವೀರ ಸಮಾಜದಲ್ಲಿ ಚಾಲ್ತಿಯಲ್ಲಿತ್ತು. ಬ್ರಿಟಿಷರ ಸರಕಾರ ಸಹಕಾರಿ ಪದ್ಧತಿಯ ಕಾನೂನು ಭಾರತ ದೇಶದಲ್ಲಿ ಜಾರಿ ಮಾಡಲು ಇದು ಪ್ರೇರಣೆಯಾಗಿತ್ತೆಂದರೆ ತಪ್ಪಾಗಲಾರದು.

**ಮೂಲದಿಂದಲೇ ಕರ ವಸೂಲಿ ತತ್ವ ಮೊಗವೀರರ ಬಳುವಳಿ**

ಮೀನು ಹಿಡಿಯುವ ಗುಂಪುಗಳಾದ 'ದೋಣಿಯ ಬಿಸನ', 'ಪಟ್ಟೆಬಲೆ', 'ವೈಬಲೆ', 'ರಂಪಣಿ' ಮತ್ತು 'ಕೈರಂಪಣಿ'ಯಲ್ಲಿ ತಮ್ಮ ಸಂಪಾದನೆಯ ಒಂದು ಭಾಗವನ್ನು ತಮ್ಮ ಮೊಗವೀರ ಗ್ರಾಮಸಭೆಗೆ ಕೊಡುತ್ತಿದ್ದರು. ಈ ಪಾಲು ಫಂಡಿನ ಪ್ರತಿ ಸದಸ್ಯನಿಗೆ ಸಿಗುವ ಪಾಲಿಗೆ ಸಮಾನವಾಗಿತ್ತು. ಈ ಪಾಲನ್ನು 'ಬಬ್ಬರ್ಯ ಪಾಲು' ಎಂದು ಕರೆಯುವುದು ವಾಡಿಕೆ. ಅನೇಕ ಮೊಗವೀರ ಗ್ರಾಮ ಸಭೆಗಳು ಈ ಹಣವನ್ನು ದಿಂದ ಶಾಲೆ, ವಿದ್ಯಾರ್ಥಿ ವೇತನ, ಭಜನಾ ಮಂದಿರ, ದೈವಸ್ಥಾನ, ವ್ಯಾಯಾಮ ಶಾಲೆ ಇತ್ಯಾದಿಗಳಿಗೆ ವಿನಿಯೋಗಿಸಿ, ಮೊಗವೀರ ಸಮಾಜದ ಸೇವೆ ಮಾಡುತ್ತಿದ್ದರು. ಕೆಲವು ಗ್ರಾಮ ಸಭೆಗಳು, ಸದಸ್ಯರಿಗೆ ಸಾಲಕೊಟ್ಟು ಸಹಕರಿಸುತ್ತಿತ್ತು. ನಮ್ಮ ದೇಶದಲ್ಲಿ ಆದಾಯ ಕರವನ್ನು ಆದಾಯದ ಮೂಲದಿಂದಲೇ ವಸೂಲಿ ಮಾಡುವ ವಿಧಾನ (ಟಿ.ಡಿ.ಎಸ್) 1961 ಆದಾಯ ಕರದ ಕಾನೂನಿನಲ್ಲಿ ಅಳವಡಿಸಿದ್ದರು. ಆದರೆ, ಮೊಗವೀರ ಸಮಾಜವು ಈ ಪದ್ಧತಿಯನ್ನು ಸಾಮಾಜಿಕ ಕಟ್ಟು ನಿಟ್ಟಿನಲ್ಲಿ ಸುಮಾರು 1961 ರ ಮೊದಲೇ ಇಂತಹ ವ್ಯವಸ್ಥೆಯನ್ನು ಜಾರಿ ಮಾಡಿದ್ದರು ಮತ್ತು ಸಂಗ್ರಹಿಸಿದ ಹಣವನ್ನು ಸದುಪಯೋಗ ಮಾಡಿದ್ದರು. ಬರಹವಿಲ್ಲದ ಯಾ ಸ್ವಲ್ಪ ಕಲಿತ ನಮ್ಮ ಹಿರಿಯರ ಇಂತಹ ಸುವ್ಯವಸ್ಥೆಯನ್ನು ಎಷ್ಟು ಹೊಗಳಿದರೂ ಸಾಲದು.

**ಜೀವವಿಮೆ ಮತ್ತು ಪರಸ್ಪರ ಸಹಾಯಕ ಸಂಘಗಳು**

ಮೊಗವೀರರ ಗ್ರಾಮಸಭೆಯ ನೇತೃತ್ವದಲ್ಲಿ ಮೊಗವೀರ ಗ್ರಾಮ ಸಭೆಯ ಸದಸ್ಯರಿಗಾಗಿ 'ಮರಣ ಫಂಡು' ಎಂಬ ನಿಧಿಯನ್ನು ಸ್ಥಾಪಿಸಿದ್ದರು. ಈಗಲೂ ಕೆಲವು ಮೊಗವೀರ ಗ್ರಾಮ ಸಭೆಗಳು ಮರಣ ಫಂಡುಗಳನ್ನು ಜಾರಿಯಲ್ಲಿಟ್ಟಿವೆ. ಮುಂಬಾಯಿಗೆ ವಲಸೆ ಬಂದು ಮೊಗವೀರರು ಮುಂಬಾಯಿಯಲ್ಲಿ 1935ರಲ್ಲಿ ಮರಣ ಫಂಡು ಸ್ಥಾಪಿಸಿದರೆಂಬ ದಾಖಲೆಗಳಿವೆ. ಮರಣ ಫಂಡಿನ ಸದಸ್ಯರು ಪ್ರತೀ ವರ್ಷ ಯಾ ಸದಸ್ಯರ ಮರಣವಾದಾಗ ನಿರ್ಧರಿಸಿದ ಮೊತ್ತ ಪಾವತಿ ಮಾಡುತ್ತಾರೆ. ಈ ಆದಾಯದಿಂದ ಸದಸ್ಯನ ಮರಣವಾದಾಗ ನಿರ್ಧರಿಸಿದ ಮೊತ್ತವನ್ನು ಅವನ ಕುಟುಂಬಕ್ಕೆ ಪಾವತಿಸಲಾಗುತ್ತದೆ. ಇಂತಹ ಜೀವವಿಮೆ ಮತ್ತು

ಪರಸ್ಪರ ಸಹಾಯ ಸಂಘವನ್ನು ಒಂದು ನೂರು ವರ್ಷಗಳ ಹಿಂದೆ ಸ್ಥಾಪಿಸಿ ಸುವ್ಯವಸ್ಥಿತವಾಗಿ ನಡೆಸಿಕೊಂಡು ಬಂದ ಕೀರ್ತಿ ಮೊಗವೀರ ಸಮಾಜದ್ದು.

**ಕುಲಗುರು ಪರಂಪರೆ ಮತ್ತು ಗುರಿಕಾರ ಪದ್ಧತಿ**

ಮೊಗವೀರ ಸಮಾಜದಲ್ಲಿ ಬಹಳ ಹಿಂದಿನಿಂದ, ಅಂದರೆ ಸಾಧಾರಣ ಐದು ನೂರು ವರ್ಷಗಳ ಹಿಂದಿನಿಂದ ಕುಲಗುರು ಪರಂಪರೆ ಇದ್ದಂತ ಕಾಣುತ್ತದೆ. ಹೆಚ್ಚಿನ ವಿವರಕ್ಕಾಗಿ "ಮೊಗವೀರರ ಧಾರ್ಮಿಕ ಆಚರಣೆಗಳು" ಎಂಬ ಅಧ್ಯಾಯದ 'ಕುಲಗುರು ಪರಂಪರೆ' ಎಂಬ ವಿಭಾಗವನ್ನು ನೋಡಿರಿ. ಮೊಗವೀರ ಸಮಾಜದ ಗ್ರಾಮಸಭೆ, ಮೊಗವೀರರ ಸಂಯುಕ್ತ ಪಟ್ಣ ಸಭೆ ಮತ್ತು ಮೊಗವೀರರ ಹೋಬಳಿ ಸಭೆಗಳಲ್ಲಿ ಪ್ರಾರಂಭದಲ್ಲಿ ಗುರಿಕಾರ ಪದ್ಧತಿಯ ಆಡಳಿತ ಕ್ರಮವಿತ್ತು. ಹೆಚ್ಚಿನ ಮಾಹಿತಿಗಾಗಿ "ಮೊಗವೀರ ಸಂಘಟನೆಗಳು" ಎಂಬ ಅಧ್ಯಾಯದ 'ಸಾಂಪ್ರದಾಯಿಕ ಮೊಗವೀರ ಸಂಘಟನೆ' ಎಂಬ ವಿಭಾಗವನ್ನು ನೋಡಿ. ಇಂತಹ ಕುಲಗುರು ಪರಂಪರೆ ಮತ್ತು ಗುರಿಕಾರ ಪದ್ಧತಿ ಇತರ ಸಮಾಜಗಳ'ಲ್ಲಿ ಇರಲಿಲ್ಲವೆಂದು ಹೇಳಬೇಕಾಗುತ್ತದೆ.

**ಮೊಗವೀರರ ಮೂಲಸ್ಥಾನಗಳು**

ಮೊಗವೀರ ಸಮಾಜದಲ್ಲಿ ಮಾತ್ರ ನಾಗಾರಾಧನೆಯ ಮೂಲಸ್ಥಾನಗಳು 'ಬರಿ/ಬಳಿ'ಯ ಆಧಾರದ ಮೇಲೆ ಸಂಘಟಿತವಾಗಿದೆ. ಅಂದರೆ ಮೊಗವೀರರಲ್ಲಿರುವ ಹದಿನೈದು 'ಬರಿ/ಬಳಿ'ಯ ಸದಸ್ಯನು ಹುಟ್ಟಿನಿಂದ ಮೊಗವೀರ ಮೂಲಸ್ಥಾನದ ಸದಸ್ಯನಾಗುತ್ತಾನೆ ಮತ್ತು ತನ್ನ ಮೂಲಸ್ಥಾನ ಯಾವುದೆಂದು ಗುರುತಿಸಲು ಶಕ್ಯನಾಗುತ್ತಾನೆ. ಹೆಚ್ಚಿನ ಮಾಹಿತಿಗಾಗಿ "ಮೊಗವೀರರ ಧಾರ್ಮಿಕ ಆಚರಣೆಗಳು" ಎಂಬ ಅಧ್ಯಾಯದ 'ಮೊಗವೀರ ಮೂಲಸ್ಥಾನ' ಎಂಬ ವಿಭಾಗವನ್ನು ನೋಡಿರಿ. ಇತರ ಸಮಾಜದಲ್ಲಿ ನಾಗಾರಾಧನೆ ಇದ್ದರೂ ಒಂದೇ 'ಬರಿ/ಬಳಿ' ಯವರಿಗೆ ಅವರದೇ ಆದ ಮೂಲಸ್ಥಾನಗಳಿಲ್ಲ.

**ಮೊಗವೀರ ಮಹಿಳಾ ಸಬಲೀಕರಣ**

ಪ್ರತೀ ಮೊಗವೀರ ಗ್ರಾಮಸಭೆಯ ಪರಿವಿಧಿಯಲ್ಲಿ ಮಹಿಳೆಯರು 'ಮಹಿಳಾ/ಭಗಿನಿ/ಮಾತೃ ಸಮಾಜ'ಗಳನ್ನು ಸ್ಥಾಪಿಸಿದ್ದಾರೆ. ಮೊಗವೀರ ಸಮಾಜದ ಸಾಂಪ್ರದಾಯಿಕ ಸಂಘ/ಸಂಸ್ಥೆಯೊಂದಿಗೆ ಸಮಾಜದ ಉನ್ನತಿಗಾಗಿ ಶ್ರಮಿಸುತ್ತಿದ್ದಾರೆ. ಮೊಗವೀರ ಗ್ರಾಮದ ಮಹಿಳಾ ಸಮಾಜಗಳು ತಮ್ಮದೇ ಆದ ಶೃಂಗ ಸಭೆಗಳನ್ನು ಸ್ಥಾಪಿಸಿದ್ದಾರೆ ಮತ್ತು ಇಂತಹ ಶೃಂಗ ಸಭೆಗಳಿಗೆ ಮೊಗವೀರ ಮಹಾಜನ ಸಂಘದಲ್ಲಿ ಪ್ರಾತಿನಿಧ್ಯ ಕೂಡಾ ಕೊಟ್ಟಿರುತ್ತಾರೆ. ಮೊಗವೀರ ಸಮಾಜವಲ್ಲದೆ ಇತರ ಸಮಾಜದಲ್ಲಿ ಈ ರೀತಿಯ ಸಂಘಟನೆ ಇಲ್ಲವೆಂದು ತಿಳಿದು ಬರುತ್ತದೆ.

**ಮುಂಬಾಯಿಗೆ ವಲಸೆ ಬಂದವರಲ್ಲಿ ಮೊಗವೀರರು ಮೊದಲಿಗರು**

ಮೊಗವೀರ ಸಮಾಜದ ಶ್ರೀ ರಾಮ ಪಂಜಿ (ಕಣ್ಣಂಗಾರು) 1878 ರಲ್ಲಿ 'ಶ್ರೀ ಮದ್ಭಾರತ ಮಂಡಳಿ'ಯನ್ನು ಸ್ಥಾಪಿಸಿದರು. 'ಬಾರ್ಕೂರು ಹೋಬಳಿ ಸಭೆ' 1884ರಲ್ಲಿ ಸ್ಥಾಪಿಸಲ್ಪಟ್ಟಿದೆ. 1894ರಲ್ಲಿ ಮುಂಬಾಯಿಯಲ್ಲಿ ನೆಲೆಸಿರುವ ಸಾಧಾರಣ ಐವತ್ತು ಮೊಗವೀರ' ಗ್ರಾಮಗಳ 1141 ಮೊಗವೀರರು 'ಮಣ್ಣುಪ್ಪು'ಗೆ ಕರ ಹಾಕಬಾರದೆಂದು 'ಬಾರ್ಕೂರು ಹೋಬಳಿ ಸಭಾ' ಮುಂಬಾಯಿ ಮಾಡಿರುವ ಮನವಿಗೆ ಪ್ರೋತ್ಸಾಹ ಕೊಟ್ಟಿದ್ದರು. ಈ ಮನವಿ ಮದ್ರಾಸು ಸರಕಾರ ('ಪ್ರೆಸಿಡೆನ್ಸಿ')ಗೆ ಕಳುಹಿಸಿಕೊಟ್ಟಿರುತ್ತಾರೆ. ಆದರೆ ಇದಕ್ಕಿಂತ ಸುಮಾರು ಕಡಿಮೆ ಪಕ್ಷ ಐವತ್ತು ವರ್ಷಗಳ ಹಿಂದೆ ಮೊಗವೀರ ಗ್ರಾಮಸಭೆಗಳ ಮುಂಬಾಯಿ ಶಾಖೆಗಳು ಮುಂಬಾಯಿಯಲ್ಲಿ ಇದ್ದವೆಂದು ಹೇಳಲು ಬಹಳಷ್ಟು ಆಧಾರಗಳಿವೆ. ಅಂದರೆ ಸುಮಾರು 1820ರಲ್ಲಿ ಮೊಗವೀರರು ಮುಂಬಾಯಿಯಲ್ಲಿ ಇದ್ದರೆಂದು ಲಿಖಿತ ಆಧಾರದ ಮೇಲೆ ಅಂದಾಜು ಮಾಡಬಹುದು. ಇದಲ್ಲದೆ 1902ರಲ್ಲಿ

ಮೊಗವೀರ ವ್ಯವಸ್ಥಾಪಕ ಮಂಡಳಿ 1934ರಲ್ಲಿ ಮೊಗವೀರ ಯುವಕ ಸಂಘ, 1941ರಲ್ಲಿ ಮೊಗವೀರ ಮಹಾಜನ ಸೇವಾ ಸಂಘ ಇತ್ಯಾದಿ ಸಂಘಟನೆಗಳನ್ನು ಮುಂಬಾಯಿಯಲ್ಲಿ ಮೊಗವೀರರು ಸ್ಥಾಪಿಸಿದ್ದರು. ಮೊಗವೀರ ವ್ಯವಸ್ಥಾಪಕ ಮಂಡಳಿಯು ರಾತ್ರಿ ಶಾಲೆ, ಹಗಲು ಶಾಲೆ, ಸಹಕಾರಿ ಬ್ಯಾಂಕ್, ಸಹಕಾರಿ ವಸತಿ ಗೃಹ ಸಂಕುಲನ, ಮೊಗವೀರ ಕನ್ನಡ ಮಾಸ ಪತ್ರಿಕೆ ಇತ್ಯಾದಿಗಳನ್ನು ಸ್ಥಾಪಿಸಿದ್ದರು. ಹೆಚ್ಚಿನ ವಿವರಗಳಿಗಾಗಿ "ಮೊಗವೀರರ ಸಂಘಟನೆಗಳು" ಎಂಬ ಅಧ್ಯಾಯ ನೋಡಿರಿ. ಇದರಿಂದ ಮೊಗವೀರರು ಮುಂಬಾಯಿಗೆ ತುಳುನಾಡಿನಿಂದ ವಲಸೆ ಬಂದವರಲ್ಲಿ ಮೊದಲಿಗರಲ್ಲದೆ, ಸಂಘ ಸಂಸ್ಥೆಗಳನ್ನು ಕಟ್ಟಿ ಸಮಾಜ ಸೇವೆ ಮಾಡಿದವರಲ್ಲಿ ಸಹ ಮೊದಲಿಗರೆಂದು ಹೇಳಬೇಕಾಗುತ್ತದೆ.

**ಮೊಗವೀರ ಸ್ವಾತಂತ್ರ್ಯ ಸೇನಾನಿಗಳು**

"ಪ್ರಖ್ಯಾತ ಮೊಗವೀರ"ರೆಂಬ ಅಧ್ಯಾಯದಲ್ಲಿ ಮೊಗವೀರರ ಸ್ವಾತಂತ್ರ್ಯ ಸೇನಾನಿಗಳ ಮಾಹಿತಿಯನ್ನು ಕೊಟ್ಟಿರುತ್ತೇನೆ. ಉಳ್ಳಾಲದ ಶ್ರೀ ಚೆನ್ನಪ್ಪ ಗುರಿಕಾರ ಮತ್ತು ಶ್ರೀ ಕುಂಜ ಮರಕಾಲರು ಉಳ್ಳಾಲದ ರಾಣಿ ಅಬ್ಬಕ್ಕನವರ ನೌಕಾದಳದ ಅಧಿಪತಿಗಳಾಗಿದ್ದರು. ಉಳ್ಳಾಲದ ರಾಣಿ ಅಬ್ಬಕ್ಕ ಪೋರ್ಚುಗೀಸರ ವಿರುದ್ಧ 3 ಬಾರಿ ವಿಜಯಿಯಾಗಿರುವುದು ಇತಿಹಾಸದ ಪುಟಗಳಲ್ಲಿ ದಾಖಲಾಗಿದೆ. ಪೋರ್ಚುಗೀಸರ ಸುಸಜ್ಜಿತ ನೌಕಾದಳದ ವಿರುದ್ಧ ರಾಣಿ ಅಬ್ಬಕ್ಕನ ನೌಕಾದಳವನ್ನು ಉಳ್ಳಾಲದಿಂದ ಬಾರ್ಕೂರುವರೆಗಿನ ಮೊಗವೀರರನ್ನು ಒಟ್ಟುಗೂಡಿಸಿ ಸಜ್ಜುಗೊಳಿಸಿದ ಕೀರ್ತಿ ಶ್ರೀ ಚೆನ್ನಪ್ಪ ಗುರಿಕಾರ ಮತ್ತು ಶ್ರೀ ಕುಂಜ ಮರಕಾಲರಿಗೆ ಸಲ್ಲುತ್ತದೆ. ಈ ಮೂರು ನೌಕಾ ಯುದ್ಧದಲ್ಲೂ ಮೊಗವೀರರ ದೋಣಿಗಳನ್ನು ಕಳುಹಿಸಲಾಗಿತ್ತು ಮತ್ತು ನೌಕಾದಳದ ಸೇನಾನಿಗಳು ಮೊಗವೀರರು. ನೌಕಾಯುದ್ಧದಲ್ಲಿ ಪ್ರಾಣ ತೆತ್ತವರು ಮೊಗವೀರರು. 1581ರ ನೌಕಾಯುದ್ಧದಲ್ಲಿ ರಾಣಿ ಅಬ್ಬಕ್ಕನವರನ್ನು ಪಾಲ್ಗೊಳ್ಳುವಂತೆ ಒಪ್ಪಿಸಿ. ಅವರ ರಕ್ಷಣೆಯ ಭಾರವನ್ನು ತರುಣ ನೌಕಾ ಸೇನಾನಿ ಶ್ರೀ ಕುಂಜ ಮರಕಾಲರಿಗೆ ಒಪ್ಪಿಸಲಾಗಿತ್ತು. ಈ ಜವಾಬ್ದಾರಿಯನ್ನು ಶ್ರೀ ಕುಂಜ ಮರಕಾಲರು ನಿರ್ವಹಿಸಿದ್ದರು ಮತ್ತು ರಾಣಿ ಅಬ್ಬಕ್ಕನನ್ನು ರಕ್ಷಿಸುವಲ್ಲಿ ಸಫಲರಾಗಿದ್ದರು. 1581ರ ನೌಕಾಯುದ್ಧದಲ್ಲಿ ಹೀನಾಯವಾಗಿ ಸೋತ ಪೋರ್ಚುಗೀಸರು ಯುದ್ಧದ ನಂತರ ಕಪಟತನದಿಂದ ಶ್ರೀ ಕುಂಜ ಮರಕಾಲರನ್ನು ಅಪಹರಿಸಿ ಗೋವಾಕ್ಕೆ ಕರೆದುಕೊಂಡು ಹೋಗಿ ಕೊಂದು ಅವರ ದೇಹವನ್ನು ಸಿಗಿದು ತೋರಣ ಕಟ್ಟಿದ್ದರೆಂದು ತಿಳಿದು ಬರುತ್ತಿದೆ. ಸಮುದ್ರದಲ್ಲಿ ನಡೆದ ಈ ಯುದ್ಧಗಳಲ್ಲಿ ಮೊಗವೀರರ ದೋಣಿಗಳು ಮತ್ತು ಇತರ ಯುದ್ಧ ಸಾಮಾಗ್ರಿಗಳು ಉಪಯೋಗವಾಗುತ್ತಿತ್ತು. ಹೆಚ್ಚಿನ ಸಂಖ್ಯೆಯಲ್ಲಿ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪ್ರಾಣ ತೆತ್ತವರು ಮೊಗವೀರರು. ಈ ಹಿನ್ನೆಲೆಯಲ್ಲಿ ಮೊಗವೀರ ನೌಕಾ ದಳಪತಿ ಶ್ರೀ ಕುಂಜ ಮರಕಾಲ ಮತ್ತು ಸ್ವಾತಂತ್ರ್ಯ ಸಂಗ್ರಾಮದ ಮೊಗವೀರ ಹುತಾತ್ಮರಲ್ಲಿ ಪ್ರಥಮರೆಂದು ಗುರುತಿಸಬಹುದು.

**ಉಪಸಂಹಾರ**

ಮೊಗವೀರ ಸಮಾಜದ ಹಿರಿಮೆಯ ವಿಷಯದಲ್ಲಿ ಇನ್ನೂ ಕೆಲವು ಉದಾಹರಣೆಯನ್ನು ಕೊಡಬಹುದು. ಆದರೆ ನಮ್ಮ ಪೂರ್ವಜರು ಹೆಚ್ಚಿನ ವಿದ್ಯಾಭ್ಯಾಸವಿಲ್ಲದಿದ್ದರೂ ತಮ್ಮದೇ ಆದ ಅನುಕರಣೀಯ ಸಂಸ್ಕೃತಿಯನ್ನು ಸೃಷ್ಟಿಸಿ ಸಮಾಜದ ಒಂದು ಮಾದರಿಯ ಸಮುದಾಯವೆಂದು ಗುರುತಿಸಲ್ಪಡುವಂತೆ ಮಾಡಿರುವುದು ನಮ್ಮೆಲ್ಲರಿಗೂ ಹೆಮ್ಮೆಯ ವಿಷಯ.

**ಮೊಗವೀರ ಸಮಾಜದಲ್ಲಾಗಬೇಕಾದ ಸುಧಾರಣೆಗಳು**

ಕರ್ನಾಟಕ ಕರಾವಳಿಯ ಮೊಗವೀರ ಗ್ರಾಮಸಭೆಗಳು/ಕೂಡಿಗೆಗಳಲ್ಲಿ ಮೊಗವೀರ ಸಮಾಜದ ಶೇಕಡಾ 50ರಷ್ಟು ಜನರು ಮಾತ್ರ ಈಗ ವಾಸಿಸುತ್ತಿದ್ದಾರೆ. ಉಳಿದ ಶೇಕಡಾ 50 ಮೊಗವೀರರು ಪ್ರಮುಖವಾಗಿ ಕರ್ನಾಟಕ ಮತ್ತು ಮಹಾರಾಷ್ಟ್ರ ಮತ್ತು ದೇಶ,

ವಿದೇಶಗಳಲ್ಲಿ ವಾಸಿಸುತ್ತಿದ್ದಾರೆ. ಇಪ್ಪತ್ತನೆಯ ಶತಮಾನದ ಪ್ರಾರಂಭದಲ್ಲಿ (1900ರಲ್ಲಿ) ಮೊಗವೀರ ಸಮುದಾಯದ ಶೇಕಡಾ 95 ಮೊಗವೀರರು ಮೀನುಗಾರಿಕೆ ಮಾಡುತ್ತಿದ್ದರು. ಆದರೆ ಇಂದು ಮೊಗವೀರ ಸಮಾಜದ ಶೇಕಡಾ 30 ಮೊಗವೀರರು ಮಾತ್ರ ಮೀನುಗಾರಿಕೆ ಮಾಡುತ್ತಿದ್ದಾರೆಂದು ಅಂದಾಜು ಮಾಡಬಹುದು. ಮೊಗವೀರ ಗ್ರಾಮದಲ್ಲಿ ಯಾ ಆಸುಪಾಸಿನಲ್ಲಿ ನೆಲೆಸಿರುವ ಶೇಕಡಾ 20 ಮೊಗವೀರರು ಮೀನುಗಾರಿಕೆಯಲ್ಲದೆ ಇನ್ನಿತರೆ ಉದ್ಯೋಗದಲ್ಲಿ ತೊಡಗಿಸಿಕೊಂಡಿರುತ್ತಾರೆ. ಮೊಗವೀರ ಸಮಾಜದ ಇಂತಹ ಮಹತ್ವಪೂರ್ಣ ಬದಲಾವಣೆಯಿಂದ ಮೊಗವೀರ ಸಮಾಜದ ಜೀವನಕ್ರಮ, ಸಂಘ/ಸಂಸ್ಥೆಗಳಲ್ಲಿ ಮತ್ತು ಧಾರ್ಮಿಕ ಆಚರಣೆಯಲ್ಲಿ ಸುಧಾರಣೆ ತರುವುದು ಅಗತ್ಯವಾಗಿದೆ.

**ಮೊಗವೀರರ ವಾಸಸ್ಥಾನಗಳು ಬರಿದಾಗುತ್ತಿದೆ**

ಕರ್ನಾಟಕ ಕರಾವಳಿಯಲ್ಲಿ ವಾಸಿಸುವ ಶೇಕಡಾ 50 ಮೊಗವೀರರಲ್ಲಿ ಶೇಕಡಾ 50 ಮೊಗವೀರರು ಮೀನುಗಾರಿಕೆ ಮಾಡುತ್ತಿದ್ದಾರೆ. ಮೀನುಗಾರಿಕೆ ಮಾಡುವ ಮೊಗವೀರರಲ್ಲಿ ಹೆಚ್ಚಿನವರು ಈಗ ಮೀನು ಇಳಿದಾಣ ಮತ್ತು ಮೀನುಗಾರಿಕೆಯ ಬಂದರಗಳ ಪರಿಸರದಲ್ಲಿ ವಾಸ ಮಾಡಬಯಸುತ್ತಾರೆ. ಇದರಿಂದಾಗಿ ಮೀನು ಇಳಿದಾಣ ಮತ್ತು ಮೀನುಗಾರಿಕೆಯ ಬಂದರುಗಳ ಪರಿಸರದಲ್ಲಿ ಅಲ್ಲದೆ ಇತರ ಮೊಗವೀರ ಗ್ರಾಮಗಳ'ಲ್ಲಿ ಮೊಗವೀರರ ಸಂಖ್ಯೆ ತೀರಾ ಕಡಿಮೆಯಾಗುತ್ತಿದೆ. ಇತರ ಉದ್ಯೋಗದಲ್ಲಿ ತೊಡಗಿರುವ ವಿದ್ಯಾವಂತ ಸ್ಥಳೀಯ ಮೊಗವೀರರು ತಮ್ಮ ಮೊಗವೀರ ಗ್ರಾಮದ ಮನೆಯಿಂದ ಹೊರಗೆ ಮನೆ ಮಾಡುವುದು ಅನುಕೂಲವೆಂದು ತಿಳಿಯುತ್ತಾರೆ. ಕರ್ನಾಟಕ ಕರಾವಳಿಯಿಂದ ಇತರ ಕಡೆಗೆ ವಲಸೆ ಹೋಗಿರುವ ಮೊಗವೀರರು ತಮ್ಮ ಗ್ರಾಮದಲ್ಲಿರುವ ಮನೆಗೆ ಹಿಂದಿರುಗುವುದಿಲ್ಲ. ಮೊಗವೀರರ ಸ್ಥಳೀಯ ಮನೆಯಲ್ಲಿ ವಿದ್ಯಾವಂತ ಮತ್ತು ಸ್ಥಿತಿವಂತ ಮೊಗವೀರರಿಗೆ ಬೇಕಾದ ಸ್ನಾನಗೃಹ, ಶೌಚಾಲಯ ಮತ್ತು ವಿಶ್ರಾಂತಿ ಪಡೆಯಲು ಸ್ಥಳಗಳ ಅಭಾವವಿದೆ. ಈ ಕೆಲವು ಕಾರಣಗಳಿಂದ ಮೊಗವೀರ ಗ್ರಾಮದಲ್ಲಿರುವ ಮನೆಗಳಲ್ಲಿ ಜನಸಂಖ್ಯೆ ಕಡಿಮೆಯಾಗುತ್ತಿದೆ ಮಾತ್ರವಲ್ಲದೆ ಮನೆಗೆ ಬೀಗ ಜಡಿಯುವ ಪರಿಸ್ಥಿತಿ ಉದ್ಭವವಾಗಿದೆ. ಈಗ ಮೊಗವೀರರು ತಮ್ಮ ಜಾಗ ಮತ್ತು ಮನೆಯನ್ನು ಇತರ ಸಮಾಜದವರಿಗೆ ಮಾರುತ್ತಿದ್ದಾರೆ. ಇಂತಹ ಪರಿಸ್ಥಿತಿಯಿಂದ ಸಮುದ್ರ ಬದಿಯ ನಮ್ಮ ಮೊಗವೀರ ಗ್ರಾಮಗಳು ಮೊಗವೀರ ಸಂಸ್ಕೃತಿಯ ತಾಣವಾಗಿ ಉಳಿಯುವುದಿಲ್ಲ.

**ಮೊಗವೀರ ಸಂಸ್ಕೃತಿಯ ರಕ್ಷಣೆ**

ಸಮುದ್ರ ತೀರದಲ್ಲಿರುವ, ಹೇರಳ ನೀರಿನ ವ್ಯವಸ್ಥೆಯಿರುವ, ಹಚ್ಚ ಹಸುರಿನ ತೆಂಗಿನ ಮರದ ತೋಟವಿರುವ ತಂಪಾದ ಮೊಗವೀರ ಗ್ರಾಮಗಳು ವಾಸ ಯೋಗ್ಯ ಪ್ರದೇಶವಾಗಿವೆ. ಇಂತಹ ಸಮುದ್ರ ತೀರದ ಜಾಗ ನಮಗೆ ಮುಂದೆ ಸಿಗುವುದು ಕಷ್ಟ. ಮೊಗವೀರ ಸಮಾಜದ ಸದಸ್ಯರು ಎಲ್ಲಿದ್ದರೂ ಮೊಗವೀರ ಗ್ರಾಮದ ಜಾಗ ಮತ್ತು ಮನೆಯನ್ನು ಮಾರಬಾರದು ಮತ್ತು ಜಾಗ ಮನೆ ಇಲ್ಲದವರು ಮೊಗವೀರ ಗ್ರಾಮದಲ್ಲಿ ಜಾಗ, ಮನೆ ಖರೀದಿಸಬೇಕು. ಅಲ್ಲದೆ ಮೊಗವೀರ ಸಮುದಾಯದ ಗ್ರಾಮ ಸಭೆಗಳು, ಮೂಲಸ್ಥಾನಗಳು, ಉದ್ಯೋಗಪತಿಗಳು ಮತ್ತು ವ್ಯಾಪಾರಸ್ಥರು ಒಟ್ಟಾಗಿ ಮೊಗವೀರ ಗ್ರಾಮದಲ್ಲಿ ಜಾಗ, ಮನೆಯನ್ನು ಖರೀದಿಸಿ ಮೊಗವೀರರಿಗೆ ವಾಸ್ತವ್ಯಕ್ಕೆ ಎಡೆಮಾಡಿಕೊವುದು ಉತ್ತಮ. ಇದರಿಂದ ಈ ಕೆಲಸ ಮಾಡುವ ವ್ಯಕ್ತಿಗಳಿಗೆ ಮತ್ತು ಸಂಘಟನೆಗಳಿಗೆ ನಷ್ಟವಾಗಲಾರದು ಮತ್ತು ಲಾಭವಾಗಬಹುದು. ಕಾರಣ, ಸಮುದ್ರ ತೀರದ ಜಾಗ ಮತ್ತು ಮನೆಯಲ್ಲಿ ವಾಸಸ್ಥಳವಲ್ಲದೆ ಸಣ್ಣ ಮಟ್ಟಿನ ಪ್ರವಾಸಿ ತಾಣ ಇತ್ಯಾದಿಗಳನ್ನು ಸ್ಥಾಪಿಸಲು ಸಾಧ್ಯವಿದೆ.

**ಮೊಗವೀರರ ಸಾಂಪ್ರದಾಯಿಕ ಸಂಘಟನೆಯಲ್ಲಿ ಬದಲಾವಣೆ**

**ಮಹಿಳೆಯರಿಗೆ ಪ್ರಾಥಮಿಕ ಪ್ರಾತಿನಿಧಿತ್ವ**

ಈಗಿನ ಮಹಿಳೆಯರು ವಿದ್ಯಾವಂತರಾಗಿರುವರು ಮಾತ್ರವಲ್ಲದೆ ಸಮಾಜದ ವಿವಿಧ ರಂಗದಲ್ಲಿ ಸಕ್ರಿಯರಾಗಿದ್ದು ಪುರುಷರಂತೆ ಉದ್ಯೋಗಸ್ಥರಾಗಿ, ಕುಟುಂಬದ ಜವಾಬ್ದಾರಿಯನ್ನೂ ನಿರ್ವಹಿಸುತ್ತಿದ್ದಾರೆ. ಇದು ಮೀನುಗಾರಿಕೆಯಲ್ಲಿ ತೊಡಗಿರುವ ನಮ್ಮ ಮಹಿಳೆಯರಿಗೂ ಅನ್ವಯವಾಗುತ್ತದೆ. ಈಗಿನ ಕಾನೂನಿನಲ್ಲಿ ಪೂರ್ವಜರ ಮತ್ತು ಹೆತ್ತವರ ಆಸ್ತಿಯಲ್ಲಿ ಸ್ತ್ರೀಯರಿಗೆ, ಪುರುಷರಿಗಿರುವಷ್ಟೇ ಹಕ್ಕು ನೀಡಿದೆ. ಆದರೆ ಮೊಗವೀರ ಸಮಾಜದ ಸಾಂಪ್ರದಾಯಿಕ ಸಂಘಟನೆಗಳಾದ ಮೊಗವೀರರ ಗ್ರಾಮ ಸಭೆಯ ಪ್ರಾಥಮಿಕ ಸದಸ್ಯತನ ಸ್ತ್ರೀಯರಿಗೆ ದೊರಕಿಲ್ಲ. ಇದರಿಂದಾಗಿ ಮೊಗವೀರ ಸಂಯುಕ್ತ ಪಟ್ಣ ಸಭೆ ಮತ್ತು ಹೋಬಳಿ ಸಭೆ (ಮೊಗವೀರ ಮಹಾಜನ ಸಂಘ)ಯಲ್ಲಿ ಮಹಿಳೆಯರಿಗೆ ಪ್ರಾಥಮಿಕ ಸದಸ್ಯತನವಿಲ್ಲ. ಮೊಗವೀರ ಸಮಾಜದ ಶೇಕಡಾ 50 ಮೊಗವೀರ ಮಹಿಳೆಯರಿಗೆ ಪ್ರಾಥಮಿಕ ಸದಸ್ಯತನ ನೀಡುವ ಅಗತ್ಯವಿದೆ.

**ಹೊರನಾಡ ಮೊಗವೀರರಿಗೆ ಗ್ರಾಮಸಭೆಯ ಮಾದರಿಯ ಪ್ರಾತಿನಿಧ್ಯ**

ಮೊಗವೀರ ಗ್ರಾಮಸಭೆಯ ಪ್ರಾಥಮಿಕ ಸದಸ್ಯತನ ಗ್ರಾಮದಲ್ಲಿ ನೆಲೆಸಿರುವ ಪ್ರಾಯಸ್ಥ ಪುರುಷರಿಗೆ ಮಾತ್ರ ಲಭ್ಯವಿದೆ. ಅಂದರೆ ಈಗಿನ ಪರಿಸ್ಥಿತಿಯಲ್ಲಿ ಮೀನುಗಾರಿಕೆ ಮಾಡುವ ಮತ್ತು ಮೊಗವೀರ ಗ್ರಾಮದಲ್ಲಿ ನೆಲೆಸಿರುವ ಯಾ ಆಸುಪಾಸಿನಲ್ಲಿ ನೆಲೆಸಿರುವ ಇತರ ಶೇಕಡಾ 20 ಮೊಗವೀರರಿಗೆ ಪ್ರಾಥಮಿಕ ಸದಸ್ಯತನವಿದ್ದರೂ ಅವರು ಗ್ರಾಮಸಭೆಯ ಕಾರ್ಯಕ್ರಮದಲ್ಲಿ ಭಾಗವಹಿಸುವುದು ವಿರಳ. ಕಾರಣ ಅವರು ಮೀನುಗಾರಿಕೆಯ ಉದ್ಯೋಗ ಮಾಡದಿರುವುದು. ಸಾಧಾರಣ ಶೇಕಡಾ 50 ಮೊಗವೀರರು (ಹೆಚ್ಚಿನವರು ವಿದ್ಯಾವಂತರು) ಮೊಗವೀರ ಗ್ರಾಮಸಭೆಯಿಂದ ದೂರ, ಅಂದರೆ ಕರ್ನಾಟಕ ಮತ್ತು ಮಹಾರಾಷ್ಟ್ರ ರಾಜ್ಯದ ನಗರ'ಗಳಲ್ಲಿ ಮತ್ತು ಇತರ ಕಡೆ ವಾಸಿಸುತ್ತಿದ್ದಾರೆ. ಮುಂಬಯಿಯಂತಹ ನಗರದಲ್ಲಿ ಸಾಧಾರಣ ಮೂವತ್ತೈದು ಮೊಗವೀರ ಗ್ರಾಮಸಭೆಗಳ ಶಾಖೆಗಳಿವೆ ಮತ್ತು ಇವು ದ.ಕ. ಮೊಗವೀರ ಮಹಾಜನ ಸಂಘದ ಮುಂಬಯಿ ಶಾಖೆಯ ಸದಸ್ಯರಾಗಿದ್ದಾರೆ. ಆದರೆ ಮೊಗವೀರ ಗ್ರಾಮಸಭೆಯ ಮತ್ತು ದ.ಕ. ಮೊಗವೀರ ಮಹಾಜನ ಸಂಘದ ಶಾಖೆಗಳಿಗೆ ಮೊಗವೀರ ಸಮಾಜದ ಶೃಂಗ ಸಭೆಯಲ್ಲಿ ಪ್ರಾತಿನಿಧ್ಯವಿಲ್ಲ. ಸುಮಾರು ನೂರ ಅರವತ್ತೊಂದು ಮೊಗವೀರ ಗ್ರಾಮ ಸಭೆಗಳ ಪೈಕಿ ಸುಮಾರು ಮೂವತ್ತೈದು ಗ್ರಾಮ ಸಭೆಗಳ ಶಾಖೆಗಳು ಮುಂಬಯಿಯಲ್ಲಿವೆ. ಬಗ್ವಾಡಿ ಹೋಬಳಿಯ ಕೂಡಿಗೆಗಳ ಶಾಖೆಯು ಮುಂಬಾಯಿಯಲ್ಲಿಲ್ಲ. ಅಂದರೆ, ಸಾಧಾರಣ ಶೇಕಡಾ 50 ಮೊಗವೀರ ಸಮಾಜದ ಬಾಂಧವರು ಮೊಗವೀರ ಸಾಂಪ್ರಾದಾಯಿಕ ಸಂಘಟನೆಗಳ ಪ್ರಾಥಮಿಕ ಸದಸ್ಯರಾಗಿಲ್ಲ.

**ಸಮಾರೋಪ**

ಮೊಗವೀರ ಸಮಾಜದ ಶೇಕಡಾ 50% ಮೊಗವೀರ ಮಹಿಳೆಯರು, ಮೊಗವೀರ ಸಮಾಜದ ಪುರುಷರಲ್ಲಿ ಮೀನುಗಾರಿಕೆ ಮಾಡದೆ ಮೊಗವೀರ ಗ್ರಾಮದಲ್ಲಿ ನೆಲೆಸಿರುವ ಮೊಗವೀರರು ಮತ್ತು ಮೊಗವೀರ ಸಮಾಜದ ಶೇಕಡಾ 50 ಪುರುಷರು ಮೊಗವೀರ ಸಾಂಪ್ರದಾಯಿಕ ಸಂಘಟನೆಗಳ ಪ್ರಾಥಮಿಕ ಸದಸ್ಯರಾಗಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಎಲ್ಲಾ ಮೊಗವೀರರಿಗೆ (ಮಹಿಳೆಯರನ್ನು ಕೂಡಿ) ಮೊಗವೀರ ಸಾಂಪ್ರದಾಯಿಕ ಸಂಘಟನೆಗಳಲ್ಲಿ ಪ್ರಾಥಮಿಕ ಸದಸ್ಯತನ ಕೊಡುವ ಕಾರ್ಯಕ್ರಮ ಪ್ರಾರಂಭವಾಗುವುದು ಒಳ್ಳೆಯದು.

**ಮೊಗವೀರ ಶೃಂಗ ಸಭೆಗಳ ವಿಭಿನ್ನ ಚೌಕಟ್ಟು**

ಮೊಗವೀರ ಸಮಾಜದ ಮೂರು ಹೋಬಳಿಗಳು 1923ರ ವರೆಗೆ ಬೆಣ್ಣೆಕುದ್ರುರಿನ ಶ್ರೀ ಕುಲಮಹಾಸ್ತ್ರೀ ಅಮ್ಮನವರ ದೇವಸ್ಥಾನದಲ್ಲಿ ಮೊಗವೀರ ಕುಲಗುರುಗಳ ಮೇಲ್ವಿಚಾರಣೆಯಲ್ಲಿ ಮೊಗವೀರ ಸಮಾಜದ ಅನಧಿಕೃತ ಶೃಂಗ ಸಭೆಯಂತೆ ವಾರ್ಷಿಕ ಉತ್ಸವದ ಸಮಯ ಕಾರ್ಯವೆಸಗುತ್ತಿತ್ತೆಂದು ಲಭ್ಯ ಮಾಹಿತಿಯಿಂದ ತಿಳಿದು ಬರುತ್ತದೆ. ಆದರೆ ಈ ವ್ಯವಸ್ಥೆ (ಕಾರಣಗೊತ್ತಿಲ್ಲ) 1923ರ ನಂತರ ಮುಂದುವರಿಯಲಿಲ್ಲ. ಪ್ರಸ್ತುತ ಮೊಗವೀರ ಸಮಾಜದ ಮೂರು ಹೋಬಳಿಗಳು ಒಂದಾಗಿ ಎಲ್ಲಾ ಮೊಗವೀರರ ಸಂಘಟನೆಗಳ, ಶೃಂಗ ಸಭೆಯ ಸ್ಥಾಪನೆಯಾಗಬೇಕೆಂಬ ಅಭಿಪ್ರಾಯ ಕೇಳಿ ಬರುತ್ತಿ ದೆ. ಇಂತಹ ಸರ್ವ ಹೋಬಳಿಯ ಶೃಂಗ ಸಭೆಯನ್ನು ಸ್ಥಾಪಿಸಲು ಈಗ ಅಸ್ತಿತ್ವದಲ್ಲಿರುವ ಎರಡು ಮೊಗವೀರ ಸಂಘಟನೆಗಳ ಶೃಂಗ ಸಭೆಗಳ ಸೂಕ್ಷ್ಮ ಪರಿಚಯ ಅಗತ್ಯ. ಹೆಚ್ಚಿನ ವಿವರಕ್ಕಾಗಿ "ಮೊಗವೀರರ ಸಂಘಟನೆಗಳು" ಎಂಬ ಅಧ್ಯಾಯವನ್ನು ನೋಡಿರಿ. ಮೊಗವೀರರ ಮಂಗಳೂರು ಮತ್ತು ಬಾರ್ಕೂರು ಹೋಬಳಿಗಳು (ಮಂಗಳೂರು ತಾಲೂಕ ಮತ್ತು ಉಡುಪಿ ತಾಲೂಕ) 1926ರಲ್ಲಿ ದಕ್ಷಿಣ ಕನ್ನಡ ಮೊಗವೀರ ಮಹಾಜನ ಸಂಘವನ್ನು ಸ್ಥಾಪಿಸಿದ್ದರು. ಇದರ ಸದಸ್ಯತನ ಮೊಗವೀರ ಗ್ರಾಮ ಸಭೆಗಳಿಗೆ ಮಾತ್ರ ಸೀಮಿತ. ವೈಯಕ್ತಿಕವಾಗಿ ಮೊಗವೀರರು ಗ್ರಾಮಸಭೆಯ ಸದಸ್ಯರಾಗಿರುವುದರಿಂದ ಎಲ್ಲಾ ಮೊಗವೀರರು ದ.ಕ. ಮೊಗವೀರ ಮಹಾಜನ ಸಂಘದ ಪರೋಕ್ಷ ಸದಸ್ಯರಾಗುತ್ತಾರೆ. ದಕ್ಷಿಣ ಕನ್ನಡ ಮೊಗವೀರ ಮಹಾಜನ ಸಂಘದ ಶಾಖೆ ಮುಂಬಯಿಯಲ್ಲಿದೆ ಮತ್ತು ಈ ಶಾಖೆಯಲ್ಲಿ ಸುಮಾರು ಮೂವತ್ತೈದು ಮೊಗವೀರ ಗ್ರಾಮಸಭೆಗಳ ಮುಂಬಾಯಿ ಶಾಖೆಗಳು ಸದಸ್ಯತನ ಪಡೆದಿವೆ. ದ.ಕ. ಮೊಗವೀರ ಮಹಾಜನ ಸಂಘವು ಬೆಣ್ಣೆಕುದ್ರುರಿನ ಶ್ರೀ ಕುಲಮಹಾಸ್ತ್ರೀ ಅಮ್ಮನವರ ದೇವಸ್ಥಾನ ಮತ್ತು ಉಚ್ಚಿಲ ಶ್ರೀ ಮಹಾಲಕ್ಷ್ಮೀ ದೇವಸ್ಥಾನದ ಆಡಳಿತ ನಡೆಸುತ್ತಿದ್ದಾರೆ. ಮೊಗವೀರ ಕುಲಗುರುಗಳನ್ನು ನೇಮಿಸುವ ಅಧಿಕಾರ ಕೂಡಾ ಈ ಸಂಸ್ಥೆಗೆ ಇದೆ.

ಬಗ್ವಾಡಿ ಹೋಬಳಿ (ಕುಂದಾಪುರ ತಾಲೂಕು) ಯ ಮೊಗವೀರರನ್ನು ಪ್ರತಿನಿಧಿಸುವ "ಮೊಗವೀರ ಮಹಾಜನ ಸೇವಾ ಸಂಘ" (ಬಗ್ವಾಡಿ ಹೋಬಳಿ–1941) ಮುಂಬಯಿಯಲ್ಲಿ ಸ್ಥಾಪನೆಯಾಗಿದೆ. ಈ ಸಂಸ್ಥೆಯಲ್ಲಿ ಬಗ್ವಾಡಿ ಹೋಬಳಿಯ ಮೊಗವೀರರಿಗೆ ವೈಯಕ್ತಿಕ ಸದಸ್ಯತನ ಲಭ್ಯವಿದೆ. ಬಗ್ವಾಡಿ ಹೋಬಳಿಯ ಮೊಗವೀರರ ಕೂಡಿಗೆಗಳಿಗೆ (ಗ್ರಾಮ ಸಭೆಗಳು) ಸದಸ್ಯತನವಿಲ್ಲ. ಈ ಸಂಸ್ಥೆಯು ಕುಂದಾಪುರದಲ್ಲಿ ಒಂದು ಶಾಖೆಯನ್ನು ಸ್ಥಾಪಿಸಿದೆ. ಈ ಶಾಖೆಯ ಆಡಳಿತ ಸಮಿತಿಯನ್ನು ಮುಂಬಯಿ ಸಭೆ ನೇಮಕ ಮಾಡುತ್ತದೆ. ಮೊಗವೀರ ಮಹಾಜನ ಸೇವಾ ಸಂಘವು ಬಗ್ವಾಡಿಯ ಶ್ರೀ ಮಹಿಷಾಸುರಮರ್ಧಿನಿ ಅಮ್ಮನವರ ದೇವಸ್ಥಾನದ ಆಡಳಿತ ನಡೆಸುತ್ತಿದೆ.

ಸಮಾರೋಪ'ದಲ್ಲಿ, ಮೊಗವೀರರ ಎರಡು ಶೃಂಗ ಸಭೆಗಳಾಗಿರುವ ದ.ಕ. ಮೊಗವೀರ ಮಹಾಜನ ಸಂಘ ಮತ್ತು ಮೊಗವೀರ ಮಹಾಜನ ಸೇವಾ ಸಂಘ (ಬಗ್ವಾಡಿ ಹೋಬಳಿ–194)ಗಳ ಸಂಘಟನೆ ಮತ್ತು ಸದಸ್ಯತನದಲ್ಲಿರುವ ವ್ಯತ್ಯಾಸವನ್ನು ಗುರುತಿಸಿ ಸರಿಪಡಿಸುವುದು ಅಗತ್ಯ.

**ಇತರ ಮೀನುಗಾರ ಜನಾಂಗಗಳೊಂದಿಗೆ ಸೇರ್ಪಡೆ**

ಕರ್ನಾಟಕ ರಾಜ್ಯದಲ್ಲಿ ಮೂವತ್ತೊಂಬತ್ತು ಮೀನುಗಾರ ಸಮುದಾಯ (ಮೊಗವೀರರು ಕೂಡಿ) ಇವೆ. ಇದರ ಪೈಕಿ ಕೆಲವು ಸಮುದಾಯಗಳು ಸಮುದ್ರ ತೀರದಲ್ಲಿ ಮತ್ತು ಕೆಲವು ಸಮುದಾಯಗಳು ಒಂದೇ ಮೀನುಗಾರ ಸಮುದಾಯವೆಂದು ಸ್ವೀಕರಿಸಿ ಪರಿಶಿಷ್ಟ ಸಮುದಾಯಕ್ಕೆ ಪರಿವರ್ತಿಸುವ ಪ್ರಯತ್ನ ನಡೆಯುತ್ತದೆ. ಹೆಚ್ಚಿನ ವಿವರಕ್ಕಾಗಿ "ಮೊಗವೀರ ಜನಾಂಗ" ಎಂಬ

ಅಧ್ಯಾಯವನ್ನು ನೋಡಿರಿ. ಈ ಎಲ್ಲಾ ಮೀನುಗಾರ ಸಮುದಾಯಗಳ ದತ್ತಾಂಶ ಲಭ್ಯವಿಲ್ಲ. ಎಲ್ಲಾ ಮೀನುಗಾರ ಸಮುದಾಯಗಳು ಒಟ್ಟಾಗಿ ತಮಗೆ ಸರಕಾರದಿಂದ ಸಿಗುವ ಸೌಲಭ್ಯಗಳನ್ನು ಪಡೆಯಲು ಪ್ರಯತ್ನ ಮಾಡಬೇಕಾಗಿದೆ. ಇದಕ್ಕಾಗಿ ಎಲ್ಲಾ ಮೀನುಗಾರರ ಒಕ್ಕೂಟ (ಶೃಂಗ ಸಭೆ)ದ ಅಗತ್ಯವಿದೆ. ಮೊಗವೀರ ಸಮಾಜವು ಈ ದಿಶೆಯಲ್ಲಿ ಕಾರ್ಯ ನಿರತವಾಗುವುದು ಉತ್ತಮ.

**ಇತರ ಹಿಂದುಳಿದ ವರ್ಗ** (ಔಃಅ)

**ಪ್ರಸ್ತಾವ'ನೆ:** ಮೊಗವೀರ ಸಮುದಾಯವನ್ನು 'ಇತರ ಹಿಂದುಳಿದ ವರ್ಗ'ವೆಂದು ಪರಿಗಣಿಸಲಾಗುತ್ತದೆ. ಮೊಗವೀರ ಸಮುದಾಯವನ್ನು 'ಕೆನೆಪದರು' ವ್ಯಾಪ್ತಿಯಿಂದ ಹೊರಗಿಟ್ಟಿರುವುದರಿಂದ 'ಇತರ ಹಿಂದುಳಿದ ವರ್ಗ'ಕ್ಕೆ ಸಿಗುವ ಪ್ರಯೋಜನಗಳಲ್ಲಿ ಮೊಗವೀರ ಸಮುದಾಯಕ್ಕೆ ಆಧ್ಯತೆ ಸಿಗುತ್ತದೆ. 'ಇತರ ಹಿಂದುಳಿದ ವರ್ಗ'ದ ಪರವಾಗಿ ಕೆಲವು ಶಿಫಾರಸ್ಸುಗಳನ್ನು ಮಾತ್ರ ಸರಕಾರ ಅನುಷ್ಠಾನಗೊಳಿಸಿದೆ. ಇಂತಹ ಪರಿಸ್ಥಿತಿಯಲ್ಲಿ ನಮ್ಮ ಕರಾವಳಿಯ ಹಳ್ಳಿಯಲ್ಲಿ ವಾಸವಾಗಿರುವ ಮೊಗವೀರರಿಗೆ ಇದರಿಂದ ಪ್ರಯೋಜನವಾಗಬಹುದು. 'ಇತರ ಹಿಂದುಳಿದ ವರ್ಗ'ಕ್ಕೆ ಲಭ್ಯವಿರುವ ಸೌಲಭ್ಯಗಳನ್ನು ಪಡೆಯಲು ಪ್ರಮಾಣ ಪತ್ರದ ಅಗತ್ಯವಿದೆ. ಇಂತಹ ಪ್ರಮಾಣ ಪತ್ರವನ್ನು ಎಲ್ಲಾ ಮೊಗವೀರರು ಪಡೆಯಬೇಕು. ಪ್ರಮಾಣ ಪತ್ರವು ಸರಕಾರಿ ಸುತ್ತೋಲೆಯಲ್ಲಿ ನಮೂದಿಸಿದ ಎಲ್ಲಾ ವಿವರ ಮತ್ತು ಮೊಗವೀರರಿಗೆ 'ಕೆನೆ ಪದರು' ಲಾಗು ಆಗುವುದಿಲ್ಲವೆಂದು ಕೂಡಾ ನಮೂದಿಸಿರಬೇಕು. ಇತರ ರಾಜ್ಯದಲ್ಲಿ ನೆಲೆಸಿರುವ ಮೊಗವೀರ ಸಮುದಾಯದ ಸದಸ್ಯರಿಗೆ 'ಇತರ ಹಿಂದುಳಿದ ವರ್ಗ' ಮತ್ತು 'ಕೆನೆ ಪದರು' ಲಾಗು ಆಗುವುದಿಲ್ಲವೆಂದು ನಮೂದಿಸಿದ ಪ್ರಮಾಣ ಪತ್ರ ಪಡೆಯುವ ಅಗತ್ಯವಿದೆ.

ಸದ್ಯ ಕರ್ನಾಟಕ ಕರಾವಳಿಯಲ್ಲಿ ವಾಸವಾಗಿರುವ ಮೊಗವೀರರು ಪ್ರಮಾಣ ಪತ್ರವನ್ನು ಪಡೆಯದಿರುವುದು, ಪ್ರಮಾಣ ಪತ್ರಗಳಲ್ಲಿ ನಿಗದಿತ ವಿವರಗಳಿಲ್ಲದಿರುವುದು, ಮೊಗವೀರರಿಗೆ 'ಕೆನೆ ಪದರು' ಲಾಗು ಆಗುವುದಿಲ್ಲವೆಂದು ನಮೂದಿಸದಿರುವುದು ಮತ್ತು ವಲಸೆ ಹೋದ ಮೊಗವೀರರಿಗೆ ಪ್ರಮಾಣ ಪತ್ರ ಕೊಡಲು ಅವರು ಕರ್ನಾಟಕ ಕರಾವಳಿಯ ಮೊಗವೀರ ಗ್ರಾಮದಲ್ಲಿ ಹುಟ್ಟಿರಬೇಕು ಮತ್ತು ಇಲ್ಲಿಯೇ ವಿದ್ಯಾಭ್ಯಾಸ ಮಾಡಿರಬೇಕೆಂಬ ಶರ್ತ (ಉಪ ನಿಯಮ) ಗಳನ್ನು ಪ್ರಮಾಣ ಪತ್ರ ಕೊಡುವ ಅಧಿಕಾರಿಗಳು ಜಾರಿ ಮಾಡಿದ್ದು ಇತ್ಯಾದಿಗಳ ಬಗ್ಗೆ ಗಂಭೀರವಾಗಿ ಚರ್ಚೆ ನಡೆದು ಎಲ್ಲರಿಗೂ ಪ್ರಮಾಣ ಪತ್ರ ಸಿಗುವಂತಾಗಬೇಕು. ಎಲ್ಲಾ ಮೊಗವೀರರಿಗೆ ಪ್ರಮಾಣ ಪತ್ರ ಸಿಗುವಂತೆ, ಮೊಗವೀರ ಗ್ರಾಮಸಭೆಗಳು, ದ.ಕ. ಮೊಗವೀರ ಮಹಾಜನ ಸಂಘ ಮತ್ತು ಮೊಗವೀರ ಮಹಾಜನ ಸೇವಾ ಸಂಘ (ಬಗ್ವಾಡಿ ಹೋಬಳಿ–1941) ಪ್ರಯತ್ನ ಮಾಡುವುದು ಒಳ್ಳೆಯದು.

**ಅಳಿಯ ಸಂತಾನ ಕಟ್ಟು**

**ಕಾನೂನಿನಲ್ಲಿ ಬದಲಾವಣೆ:** ಎಲ್ಲಾ ಹಿಂದು ಧರ್ಮದವರಿಗೆ' ಲಾಗು ಆಗುವ ಕಾನೂನು 1956ರಲ್ಲಿ ಭಾರತ ಸರಕಾರ ಜಾರಿ ಮಾಡಿತ್ತು. ಇದರಡಿಯಲ್ಲಿ ಅಳಿಯ ಸಂತಾನ ಕಟ್ಟಿನಡಿಯಲ್ಲಿ ಜಾರಿಯಲ್ಲಿರುವ ಮಾತೃ ಪ್ರಧಾನ ವ್ಯವಸ್ಥೆಗಳು ರದ್ದಾಗಿವೆ. ಅಂದರೆ 1956ರಿಂದ ಅಳಿಯ ಸಂತಾನ ಕಟ್ಟಿನ ಆಸ್ತಿಗಳಲ್ಲಿ ಕುಟುಂಬದ ಎಲ್ಲಾ ಸದಸ್ಯರಿಗೆ ಹಕ್ಕು ಸಿಕ್ಕಿತು. ಆನಂತರ ಪಿತೃ ಪ್ರಧಾನ ವ್ಯವಸ್ಥೆ ಜಾರಿಗೆ ಬಂದಿದೆ. ಇನ್ನೊಂದು ಗಣನೀಯ ಬದಲಾವಣೆಯೆಂದರೆ ತಾಯಿಯ 'ಬರಿ'ಯ ಬದಲು ಮಕ್ಕಳು ತಂದೆಯ ಬರಿಯನ್ನು ಬಳಸುತ್ತಿರುವುದು. ಮೂರನೆಯ ಪ್ರಮುಖ ಬೆಳವಣಿಗೆಯೆಂದರೆ ಅವಿಭಕ್ತ ಕುಟುಂಬಗಳು ಕಣ್ಮರೆಯಾಗಿ, ಪಿತೃ ಪ್ರಧಾನ ಕುಟುಂಬದ ಮಾದರಿಯಲ್ಲಿ ತಂದೆ, ತಾಯಿ, ಮತ್ತು ಮಕ್ಕಳ ಕುಟುಂಬಗಳಾಗಿ ಪರಿವರ್ತನೆಯಾದದ್ದು.

ಇದರಿಂದಾಗಿ ಹಿಂದಿನ ಅಳಿಯ ಸಂತಾನ ಕಟ್ಟಿನ ಅವಿಭಕ್ತ ಕುಟುಂಬಗಳು ಈಗ ಅಸ್ತಿತ್ವದಲ್ಲಿ ಇಲ್ಲದಿರುವುದು. ಇಂತಹ ಬದಲಾವಣೆಯಿಂದ ಮೊಗವೀರ ಕುಟುಂಬದಲ್ಲಿ ಬಹಳಷ್ಟು ಗೊಂದಲ ಸೃಷ್ಟಿಯಾಗಿದೆ. ಹೆಚ್ಚಿನ ಮಾಹಿತಿಗಾಗಿ "ಮೊಗವೀರರ ಸಂಪ್ರದಾಯಗಳು" ಎಂಬ ಅಧ್ಯಾಯವನ್ನು ನೋಡಿರಿ.

**ಮೊಗವೀರ ಕುಟುಂಬದ ಸಮಸ್ಯೆಗಳು**

ಅಳಿಯ ಸಂತಾನ ಕಟ್ಟುಗಳು ಲಿಖಿತ ರೂಪದಲ್ಲಿದ್ದರೂ ಕರಾವಳಿ ಕರ್ನಾಟಕದಲ್ಲಿ ಆಸ್ತಿಯ ಹಕ್ಕು ಮತ್ತು ಧಾರ್ಮಿಕ ಆರಾಧನೆ ಇತ್ಯಾದಿಗಳ ಬಗ್ಗೆ ಸ್ಪಷ್ಟತೆ ಇತ್ತು. ಆದರೆ ಕಾನೂನಿನಲ್ಲಿ ಬದಲಾವಣೆಯಿಂದಾಗಿ ಭೂಮಿ, ಮನೆ, ಭೂತಸ್ಥಾನ, ಮೂಲಸ್ಥಾನಗಳ ಒಡೆತನ ಅಳಿಯಂದಿರಿಂದ ಬದಲಾಗಿ ಹಿಂದೂ ಕಾನೂನಿನ್ವಯ ಮಕ್ಕಳಿಗೆ ಸಿಗುತ್ತದೆ. ಹಿಂದೆ ತಾಯಿಯ 'ಬರಿ'ಯನ್ನು ಬಳಸುತ್ತಿದ್ದ ಮೊಗವೀರರು ಈಗ ತಂದೆಯ 'ಬರಿ'ಯನ್ನು ಬಳಸುತ್ತಿದ್ದರಿಂದ ಮದುವೆಯ ಸಮಯ ಸಗೋತ್ರ ವಿವಾಹವನ್ನು ತಪ್ಪಿಸಲು ಮದುಮಕ್ಕಳ 'ಬರಿ'ಯನ್ನು ಹುಡುಕುವುದು ಕಷ್ಟವಾಗುತ್ತಿದೆ. ಇನ್ನೂ ದೊಡ್ಡ ಗೊಂದಲವೆಂದರೆ, ಒಂದು ಮನೆಯಲ್ಲಿರುವ ತಂದೆ, ತಾಯಿ, ಇಬ್ಬರು ಮಕ್ಕಳು ಮತ್ತು ಅವರ ಹೆಂಡಂದಿರು, ಅವರೆಲ್ಲರ ಮನೆ ದೈವ ಮತ್ತು ಮೂಲಸ್ಥಾನಗಳನ್ನು ಹುಡುಕಲು ಕಷ್ಟವಾಗಬಹುದು. ಕರ್ನಾಟಕ ರಾಜ್ಯದಲ್ಲಿ ಕಾನೂನು ಎಲ್ಲರಿಗೂ ಅನ್ವಯಿಸುತ್ತಿದ್ದರೂ, ಧಾರ್ಮಿಕ ವಿಧಿ ವಿಧಾನಗಳನ್ನು ನ್ಯಾಯಬದ್ಧವಾಗಿ ಯಾರ ಮೇಲೂ ಹೇರುವಂತಿಲ್ಲ. ಯಾವುದೇ ಒಂದು ಸಮುದಾಯವು ಈ ಧಾರ್ಮಿಕ ವಿಧಿ ವಿಧಾನಗಳನ್ನು ಒಂದು ಹಂತದವರೆಗೆ ನಿಯಂತ್ರಿಸ್ಲು ಸಾಧ್ಯವಿದ್ದರೂ, ಈ ವ್ಯವಸ್ಥೆಯಲ್ಲಿ ಬದಲಾವಣೆ ಅಗತ್ಯವಿದೆ.

**ಪಿತೃ ಪ್ರಧಾನ ವ್ಯವಸ್ಥೆಯ ಅಗತ್ಯ**

ಹೆಚ್ಚಿನ ಮೊಗವೀರ ಕುಟುಂಬಗಳು ಈಗ ಪಿತೃ ಪ್ರಧಾನ ಕುಟುಂಬಗಳಾಗಿವೆ. ಹುಟ್ಟು ಸಾವಿನ ಧಾರ್ಮಿಕ ವಿಧಿಗಳು ಕೂಡಾ ಪಿತೃ ಪ್ರಧಾನ ಪದ್ಧತಿಯಂತೆ ನಡೆಯುತ್ತದೆ. ಆದರೆ ಮನೆ ದೈವಗಳ ಮತ್ತು ಮೂಲಸ್ಥಾನಗಳು ಮತ್ತು ನಮ್ಮ ಪೂರ್ವಜರಿಗೆ ಇಡುವ 'ಮಿತ್ತರಿ' ಇತ್ಯಾದಿ ಮಾತೃ ಪ್ರಧಾನ ಪದ್ಧತಿಯಂತೆ ನಡೆಯುತ್ತದೆ. ಈ ಎಲ್ಲಾ ವಿಷಯಗಳನ್ನು ಪರಾಮರ್ಶಿಸಿ ಎಲ್ಲರಿಗೂ ಅನುಕೂಲವಾಗುವ ಪಿತೃ ಪ್ರಧಾನ ಪದ್ಧತಿಯನ್ನು ಆಚರಣೆಗೆ ತರುವುದು ಉತ್ತಮ.

**ಪ್ರಾಣಿಬಲಿ ಮತ್ತು ದೈವದ ದರ್ಶನ**

**ಪ್ರಸ್ತಾವ್ನೆ:** ದ್ರಾವಿಡ ಆರಾಧನೆ ಪದ್ಧತಿ ಮತ್ತು ಆರ್ಯರ ಆರಾಧನಾ ಪದ್ಧತಿಯು ಪರಸ್ಪರ ವಿರೋಧವಾಗಿರುವ ಅನೇಕ ಧಾರ್ಮಿಕ ಆರಾಧನಾ ಕ್ರಮಗಳನ್ನು ನಾವು ಈಗಲೂ ಅನುಸರಿಸುತ್ತಿದ್ದೇವೆ. ನಮ್ಮ ಬೆಣ್ಣೆಕುದ್ರು ದೇವಸ್ಥಾನದಲ್ಲಿ ಈ ಎರಡು ವಿಧಾನದ ಆರಾಧನಾ ವಿಧಾನಗಳನ್ನು ಬಳಸುತ್ತಿದ್ದೇವೆ. ವೈದಿಕ ದೇವ ದೇವಿಯರಿಗೆ ವೈದಿಕ ಪದ್ಧತಿಯಲ್ಲಿ ಪೂಜೆ ನಡೆದರೆ, ದ್ರಾವಿಡ ದೈವ ದೇವತೆಗಳಿಗೆ 'ರಕ್ತಾಹಾರ', 'ದೈವದರ್ಶನ' ಮತ್ತು 'ಕೋಲಸೇವೆ' ನಡೆಯುತ್ತದೆ. ಹೆಚ್ಚಿನ ಮಾಹಿತಿಗಾಗಿ "ಮೊಗವೀರರ ಧಾರ್ಮಿಕ ಆಚರಣೆಗಳು" ನೋಡಿರಿ.

**'ರಕ್ತಾಹಾರ' (ಪ್ರಾಣಿ ಬಲಿ)**

ಕೋಳಿ, ಆಡು, ಕುರಿ ಇತ್ಯಾದಿಗಳನ್ನು ಸಾಕುವುದು ಮಾನವನ ಭಕ್ಷಣೆಗಾಗಿ ಮತ್ತು ಅವೆಲ್ಲವನ್ನೂ ಕೊಂದು ತಿನ್ನುವುದು ಎಲ್ಲರಿಗೂ ತಿಳಿದ ವಿಷಯ. ಆದರೆ ಪ್ರಾಣಿಗಳನ್ನು ಮತ್ತು ಪಕ್ಷಿಗಳನ್ನು ದೈವಗಳಿಗೆ ಪೂಜಾ ರೂಪದಲ್ಲಿ, ದೈವಸ್ಥಾನದಲ್ಲಿ ಬಲಿಕೊಡುವುದು ಸರಿಯೋ ತಪ್ಪೋ ಎಂಬ ಪ್ರಶ್ನೆಗೆ ಉತ್ತರ ಲಭ್ಯವಿಲ್ಲ.

**ದೈವ ದರ್ಶನ**

ದೈವ ದರ್ಶನದಲ್ಲಿ ದೈವವು ಮನುಷ್ಯನ, ಅಂದರೆ, ದೈವದ ಪಾತ್ರಿಯ ಮೈಮೇಲೆ ಒಂದು ಭಕ್ತಾದಿಗಳ ಸಂದೇಹ, ಸಮಸ್ಯೆ ಇತ್ಯಾದಿಗಳಿಗೆ ಪರಿಹಾರ ಸೂಚಿಸುತ್ತದೆಂದು ನಂಬಿಕೆ. ದೈವಗಳ ಅಸ್ತಿತ್ವ ಮತ್ತು ದೈವಗಳು ಪಾತ್ರಿಯ ಮೈ ಮೇಲೆ ಬರುತ್ತವೆಂದು ಒಪ್ಪಿಕೊಂಡರೂ, ದೈವಗಳ ಆವೇಶ ದೈವದ ಪಾತ್ರಿಯ ಮೈಮೇಲೆ ಗಂಟೆಕಟ್ಟಲೆ ಆವೇಶ ರೂಪದಲ್ಲಿದ್ದು ಭಕ್ತರ ಸಮಸ್ಯೆ ದುಃಖವನ್ನು ದೂರ ಮಾಡುತ್ತವೆಂದು ನಂಬುವುದು ಸತ್ಯಕ್ಕೆ ದೂರವೆಂದರೆ ತಪ್ಪಾಗಲಾರದು.

**ದೈವದ ಕೋಲ ಸೇವೆ**

ಹಿಂದಿನ ಕಾಲದಲ್ಲಿ ಕೋಲ ಸೇವೆಯು ದೈವಾರಾಧನೆಯೊಂದಿಗೆ ಮನೋರಂಜನೆಯೂ ಆಗುತ್ತಿತ್ತು. ಕಾಲ ಬದಲಾಗಿ ಕೋಲ ಸೇವೆಯು ಮನೋರಂಜನೆಯಾಗಿ ಉಳಿದಿಲ್ಲ.  ಕಾಲ ಕ್ರಮೇಣ ಕೋಲ ಸೇವೆಯ ಖರ್ಚು ಲಕ್ಷಾಂತರಕ್ಕೇರಿದೆ. ಕೋಲ ಕೊಡುವ ಕುಟುಂಬಸ್ತರ ಖರ್ಚು ಕೋಲ ಸೇವೆಯಲ್ಲಿ ಪಾಲ್ಗೊಳ್ಳುವವರ ಆದಾಯವಾಗುತ್ತದೆ ಹೊರತು ಕೋಲ ಕೊಟ್ಟ ಕುಟುಂಬಕ್ಕೆ ಅದರಿಂದ ಎಷ್ಟು ಪ್ರಯೋಜನವಾಗುತ್ತದೆಂದು ಹೇಳುವುದು ಕಷ್ಟ. ಇಂತಹ ಅನಗತ್ಯ ಖರ್ಚು ವೆಚ್ಚ ಮತ್ತು ಆಡಂಬರದ ದೈವಸೇವೆಯ ಬಗ್ಗೆ ವಿಶ್ಲೇಷಣೆ ಅಗತ್ಯ ಮತ್ತು ಸಾಧ್ಯವಾದ ಮಟ್ಟಿಗೆ ಅದನ್ನು ನಿಯಂತ್ರಿಸುವುದು ಉತ್ತಮ.

**ಕುಲಗುರು ಪರಂಪರೆ**

**ಕುಲಗುರು ಸಂಪ್ರದಾಯ**

ಮೊಗವೀರ ಸಮಾಜದ ಕೊನೆಯ ಕುಲಗುರುಗಳು ತನ್ನ ಉತ್ತರಾಧಿಕಾರಿಯನ್ನು ನೇಮಿಸದ ಕಾರಣ ಮೊಗವೀರರ ಕುಲಗುರು ಪರಂಪರೆ ನಿಂತು ಹೋಗಿದೆ. ಈ ಕುಲಗುರು ಪರಂಪರೆಯನ್ನು ಪುನಃ ಪ್ರಾರಂಭಿಸಬೇಕೋ ಯಾ ಬೇಡವೋ ಎಂಬ ಪ್ರಶ್ನೆ ಉದ್ಭವವಾಗಿದೆ.

**ಕುಲಗುರು ಪರಂಪರೆಯ ಪರವಾಗಿ ವಾದ**

ಪ್ರತಿಯೊಬ್ಬ ಮೊಗವೀರನು ಹೆಮ್ಮೆ ಪಡಬೇಕಾದ ವಿಷಯವೆಂದರೆ ಮೊಗವೀರ ಕುಲಗುರುಗಳ ಕಾಲದಲ್ಲಿ ಮೊಗವೀರ ಪುಣ್ಯಕ್ಷೇತ್ರವಾದ ಬೆಣ್ಣೆಕುದ್ರು ಶ್ರೀ ಕುಲಮಹಾಸ್ತ್ರೀ ಅಮ್ಮನವರ ದೇವಸ್ಥಾನದಲ್ಲಿ ಅವರು ಪೂಜೆ ಪುರಸ್ಕಾರ ಮತ್ತು ಆಡಳಿತ ನಡೆಸುತ್ತಿದ್ದರು. ಹಿಂದಿನ ಕಾಲದಲ್ಲಿ ಮೊಗವೀರ ಕುಲಗುರುಗಳು ಮತ್ತು ಮೊಗವೀರ ಸಮಾಜದ ನಾಯಕರು ಮತ್ತು ಶ್ರೇಷ್ಠ ನ್ಯಾಯಾಧೀಶರೂ ಆಗಿದ್ದರು. ಮೊಗವೀರ ಸಮಾಜವನ್ನು 1923ರ ವರೆಗೆ ಒಂದಾಗಿ ಇರಲು ಕಾರಣಕರ್ತರಾಗಿದ್ದರು. ಇಂತಹ ಕುಲಗುರು ಪರಂಪರೆಯನ್ನು ಪುನಃ ಪ್ರಾರಂಭಿಸಿದಲ್ಲಿ ಮೊಗವೀರ ಸಮಾಜಕ್ಕೆ ಒಳ್ಳೆಯದಾಗುತ್ತದೆಂದು ಕೆಲವರ ಅಭಿಪ್ರಾಯ.

**ಕುಲಗುರು ಪರಂಪರೆ ಬೇಡವೆನ್ನುವವರ ವಾದ**

ಬೆಣ್ಣೆಕುದ್ರು ಶ್ರೀ ಕುಲಮಹಾಸ್ತ್ರೀ ಅಮ್ಮನವರ ದೇವಸ್ಥಾನದಲ್ಲಿ ಪ್ರಾರಂಭದಿಂದ ಕುಲಗುರುಗಳು ಪೂಜೆ ಮಾಡುತ್ತಿರಲಿಲ್ಲ. ನಂತರ ಪ್ರಾರಂಭವಾದ ಕುಲಗುರು ಪರಂಪರೆಯ ಸಂಪೂರ್ಣ ಮಾಹಿತಿ ಮತ್ತು ಕುಲಗುರುಗಳ ಬೋಧನೆ ಇತ್ಯಾದಿಗಳು ಲಭ್ಯವಿಲ್ಲ. ಬೆಣ್ಣೆಕುದ್ರು  ದೇವಸ್ಥಾನ ಜೀರ್ಣೋದ್ಧಾರದ ಸಮಯದಲ್ಲಿ ಇಟ್ಟ 'ಅಷ್ಟಮಂಗಳ' ಪ್ರಶ್ನೆಯಲ್ಲಿ ಹಿಂದಿನ ಮೊಗವೀರರ ಕುಲಗುರುಗಳ ಪರಂಪರೆಯ ಪ್ರಾಮಾಣಿಕತೆಯ  ಬಗ್ಗೆ ಸಂಶಯ ವ್ಯಕ್ತಪಡಿಸಿದ್ದಾರೆ. ಅಲ್ಲದೆ ಕುಲಗುರು ಪರಂಪರೆಯನ್ನು ಪುನಃ ಸ್ಥಾಪಿಸುವ ಬಗ್ಗೆ ಅನುಸರಿಸಬೇಕಾದ ಸೂತ್ರಗಳು ಲಭ್ಯವಿಲ್ಲ. ಈಗಿನ ಕಾಲದಲ್ಲಿರುವ ಇತರ ಸಮುದಾಯಗಳ ಮಠಾಧೀಶರ

ಕಾರ್ಯ ನಿರ್ವಹಣೆಯೂ ಆಶಾದಾಯಕವಾಗಿಲ್ಲ. ಈ ಎಲ್ಲಾ ಕಾರಣದಿಂದ ಮೊಗವೀರ ಸಮಾಜಕ್ಕೆ ಕುಲಗುರು ಪರಂಪರೆಯ ಪುನಃ ಸ್ಥಾಪಿಸುವುದರಿಂದ ಪ್ರಯೋಜನವಾಗಲಿಕ್ಕಿಲ್ಲವೆಂದು ಕೆಲವರ ಅಭಿಪ್ರಾಯ.

**ಕುಲಗುರು ಪರಂಪರೆಯ ಬದಲಿ ವ್ಯವಸ್ಥೆ**

**ಪ್ರಸ್ತಾವ'ನೆ':** ಕೊನೆಯ ಮೊಗವೀರ ಕುಲಗುರುಗಳ ಜೀವನಾವಧಿಯಲ್ಲಿ ಅಂದರೆ 1926 ರಲ್ಲಿ ಮಂಗಳೂರು ಮತ್ತು ಬಾರ್ಕೂರು ಹೋಬಳಿಗಳು ದ.ಕ. ಮೊಗವೀರ ಮಹಾಜನ ಸಂಘ, ಬಗ್ವಾಡಿ ಹೋಬಳಿಯವರು 1927ರಲ್ಲಿ ಬಗ್ವಾಡಿ ಹೋಬಳಿ ಮೊಗವೀರ ಮಹಾಜನ ಸಂಘವನ್ನು ಸ್ಥಾಪಿಸಿದ್ದರು. ಇಂತಹ ಮೊಗವೀರ ಸಮಾಜದ ವಿಭಜನೆಯಾದಾಗ ಮೊಗವೀರ ಕುಲಗುರುಗಳು ಈ ಎರಡು ಮೊಗವೀರ ಶೃಂಗ ಸಭೆಗಳನ್ನು ಒಟ್ಟುಗೂಡಿಸುವುದರಲ್ಲಿ ವಿಫಲರಾಗಿದ್ದರು. ಕೊನೆಯ ಮೊಗವೀರ ಕುಲಗುರುಗಳು 1926 ರಲ್ಲಿ ಸ್ಥಾಪಿಸಿದ ದ.ಕ. ಮೊಗವೀರ ಮಹಾಜನ ಸಂಘದ "ಟ್ರಸ್ಟಿ" ಮತ್ತು ಅಧ್ಯಕ್ಷರಾಗಿದ್ದರು. ಕ್ರಮೇಣ ಅವರ "ಟ್ರಸ್ಟಿ" ಮತ್ತು ಅಧ್ಯಕ್ಷ ಸ್ಥಾನದ ಬದಲಿಗೆ ದ.ಕ. ಮೊಗವೀರ ಮಹಾಜನ ಸಂಘದ ಆಡಳಿತ ಸಮಿತಿಯ ಸದಸ್ಯರಾಗಿ ಉಳಿದಿದ್ದರು. ಮೊಗವೀರ ಕುಲಗುರುಗಳಿಗೆ ಬಗ್ವಾಡಿ ಹೋಬಳಿ ಮೊಗವೀರ ಮಹಾಜನ ಸಂಘ ಮತ್ತು ಮೊಗವೀರ ಮಹಾಜನ ಸೇವಾ ಸಂಘ ಮತ್ತು ಮೊಗವೀರ ಮಹಾಜನ ಸೇವಾ ಸಂಘ (ಬಗ್ವಾಡಿ ಹೋಬಳಿ–1941)ರಲ್ಲಿ ಯಾವ ಸ್ಥಾನಮಾನವಿರಲಿಲ್ಲ. ಅಂದರೆ, ಕೊನೆಯ ಕುಲಗುರುಗಳ ಜೀವನಾವಧಿಯಲ್ಲಿ ಕುಲಗುರು ಪರಂಪರೆಯಲ್ಲಿ ಬೆಣ್ಣೆಕುದ್ರು ದೇವಸ್ಥಾನದ ಅರ್ಚಕರಾಗಿರುವುದಷ್ಟಕ್ಕೆ ಸೀಮಿತವಾಗಿತ್ತು.

**ಬೆಣ್ಣೆಕುದ್ರು ದೇವಸ್ಥಾನದ ಮೊಗವೀರ ಅರ್ಚಕರು**

ಬೆಣ್ಣೆಕುದ್ರು ಶ್ರೀ ಕುಲಮಹಾಸ್ತ್ರೀ ಅಮ್ಮನವರ ದೇವಸ್ಥಾನದ ಪ್ರಧಾನ ಅರ್ಚಕರಾಗಿರುವುದು ಮೊಗವೀರ ಕುಲಗುರುವಿನ ಪ್ರಧಾನ ಜವಾಬ್ದಾರಿ. ಕೊನೆಯ ಕುಲಗುರುವಿನ ನಿಧನದ ನಂತರ ಕೂಡಾ ಮೊಗವೀರ ಅರ್ಚಕರು ಈ ದೇವಸ್ಥಾನದಲ್ಲಿ ಪೂಜೆ ಮಾಡುತ್ತಿದ್ದಾರೆ. ನಮ್ಮ ದೇವಸ್ಥಾನದಲ್ಲಿ ಮೊಗವೀರ ಅರ್ಚಕರಿರುವುದು ಒಳ್ಳೆಯದು ಮತ್ತು ಕಡಿಮೆ ಪಕ್ಷ ಮೂರು ಮೊಗವೀರ ಅರ್ಚಕರಿಗೆ ತರಬೇತಿ ನೀಡುವ ಅಗತ್ಯವಿದೆ. ಅರ್ಚಕರನ್ನು ತರಬೇತಿ ಮಾಡುವ ಕೇಂದ್ರಗಳು ಈಗ ಲಭ್ಯವಿರುವುದರಿಂದ ದೇವಸ್ಥಾನದ ಪೂಜಾ ವಿಧಿಗಳನ್ನು ತಿಳಿದ ಅರ್ಚಕರನ್ನು ನೇಮಿಸುವುದು ಸುಲಭ. ಇದರಿಂದ ಕುಲಗುರುವಿನ ಪ್ರಥಮ ಜವಾಬ್ದಾರಿಯನ್ನು ಸುಲಭವಾಗಿ ನಿರ್ವಹಿಸಬಹುದು. ಬೆಣ್ಣೆಕುದ್ರು ದೇವಸ್ಥಾನದ ಅರ್ಚಕರಿಗೆ ಒಳ್ಳೆಯ ವಸತಿ ಮತ್ತು ಸೂಕ್ತ ವೇತನ ಕೊಡಬೇಕು. ಅದಲ್ಲದೆ ನಮ್ಮ ಮೊಗವೀರರ ಮನೆಗಳಲ್ಲಿ ನಡೆಯುವ ಧಾರ್ಮಿಕ ಕಾರ್ಯಗಳನ್ನು ಮೊಗವೀರ ಅರ್ಚಕರಿಂದ'ಲೇ ಮಾಡಿಸಬೇಕು. ಇದರಿಂದ ಮೊಗವೀರ ಅರ್ಚಕರಿಗೆ ಸಾಕಷ್ಟು ಆರ್ಥಿಕ ಸಹಾಯ ಸಿಗುವಂತೆ ಮಾಡಬೇಕು. ಮೊಗವೀರ ಅರ್ಚಕರಿಗೆ ನಾವೆಲ್ಲ ಸೂಕ್ತ ಗೌರವ ನೀಡಬೇಕು.

**ಮೊಗವೀರರ ಧಾರ್ಮಿಕ ವಿಷಯಗಳಲ್ಲಿ ನಿರ್ಣಯ**

ಮೊಗವೀರ ಸಮುದಾಯವು ಸಾಮಾಜಿಕವಾಗಿ ಅತ್ಯಂತ ಶಿಸ್ತುಬದ್ಧವಾಗಿ ಮತ್ತು ಪ್ರಜಾಸತ್ತಾತ್ಮಕವಾಗಿ ಸಂಘಟಿಸಲ್ಪಟ್ಟ ಸಮಾಜ. ಈ ಹಿನ್ನೆಲೆಯಲ್ಲಿ ಸಿಖ್ಖ ಮತದ ಪರಂಪರೆಯನ್ನು ಅನುಸರಿಸಬಹುದು. ಅಂದರೆ ಹತ್ತು ಕುಲಗುರುಗಳ ನಂತರ ಸಿಖ್ಖ ಮತದವರು ಗುರು ಪರಂಪರೆಯನ್ನು ಅಂತ್ಯಗೊಳಿಸಿ ಶಿರೋಮಣಿ ಗುರುದ್ವಾರ ಪ್ರಬಂಧಕ ಸಮಿತಿಯನ್ನು ಸ್ಥಾಪಿಸಿದ್ದರು. ಈ ಸಂಘಟನೆಯು ಸಿಖ್ಖ ಮತದ ಎಲ್ಲಾ ಧಾರ್ಮಿಕ ವಿಷಯದಲ್ಲಿ ಅಂತಿಮ ನಿರ್ಧಾರ ತೆಗೆದುಕೊಳ್ಳುತ್ತದೆ. ಇಂದಿನ ನಮ್ಮ ಸಮಾಜದಲ್ಲಿ ಪ್ರಜಾಸತ್ತಾತ್ಮಕ ರೀತಿಯಲ್ಲಿ ಸರ್ವ ಸಮ್ಮತದಿಂದ ಆದ ನಿರ್ಣಯಗಳಿಗೆ ಹೆಚ್ಚಿನ ಮರ್ಯಾದೆ ಇದೆ. ಸರ್ವ

ಮೊಗವೀರರಿಗೆ ಪ್ರಾತಿನಿಧ್ಯವಿರುವ ಮೊಗವೀರ ಧಾರ್ಮಿಕ ಸಂಘಟನೆಯ ಸ್ಥಾಪನೆಯಿಂದ ನಮ್ಮ ಸಮಾಜವು ಒಳ್ಳೆಯದಾಗಿ ಬೆಳೆಯಬಹುದೆಂದು ಅಭಿಪ್ರಾಯ

**ಗುರಿಕಾರ ಪದ್ಧತಿ**

ಮೊಗವೀರ ಗ್ರಾಮ ಸಭೆಗಳು, ಮೊಗವೀರ ಸಂಯುಕ್ತ ಪಟ್ಣ ಸಭೆಗಳು ಮತ್ತು ಮೊಗವೀರ ಹೋಬಳಿ ಸಭೆಗಳಲ್ಲಿ ಹಿಂದಿನ ಕಾಲದಲ್ಲಿ ಗುರಿಕಾರರ ಆಡಳಿತೆ ಇತ್ತು. ಮೊಗವೀರ ದೈವಸ್ಥಾನದ 'ತಂಬಿಲ', ದೈವದರ್ಶನ ಮತ್ತು ಕೋಲ ಸೇವೆಯಲ್ಲಿ ಮೊಗವೀರ ಗುರಿಕಾರರಿಗೆ ಪ್ರಾಧಾನ್ಯತೆಯಿತ್ತು. ಮೊಗವೀರ ಸಮಾಜದ ಮದುವೆಯಿಂದ ಮರಣದ ನಂತರದ ಅಂತ್ಯಕ್ರಿಯೆಯಲ್ಲಿ ಗುರಿಕಾರರ ಮೇಲ್ವಿಚಾರಣೆ ನಡೆಯುತ್ತಿತ್ತು. ಆದರೆ ಸುಮಾರು ಐವತ್ತು ವರ್ಷಗಳಿಂದ ಮೇಲೆ ವಿವರಿಸಿದ ಎಲ್ಲಾ ಕಾರ್ಯಕ್ರಮಗಳು ಮೊಗವೀರ ಗ್ರಾಮ ಸಭೆಯಲ್ಲಿ ಆರಿಸಲ್ಪಟ್ಟ ಪ್ರತಿನಿಧಿಗಳ ಆಡಳಿತ ಸಮಿತಿಯ ಜವಾಬ್ದಾರಿಯಾಗಿದೆ. ಹಿಂದೆ ಗುರಿಕಾರ ಸ್ಥಾನಕ್ಕಾಗಿ ಸ್ಪರ್ಧೆ ನಡೆಯುತ್ತಿತ್ತು. ಆದರೆ ಈಗ ಮೊಗವೀರ ಗ್ರಾಮದಲ್ಲಿ ಗುರಿಕಾರರಾಗಲು ಗುರಿಕಾರ ಮನೆಯವರು ಮುಂದೆ ಬರುವುದಿಲ್ಲ. ಗುರಿಕಾರ ಪದ್ಧತಿಯಲ್ಲಿ ಅಳಿಯನಿಗೆ ಗುರಿಕಾರತನ ಸಿಗುತ್ತದೆ. ಈ ಅಳಿಯ ಸಂತಾನ ಕಟ್ಟಿನ ನಿಯಮ ಪಾಲನೆಯಲ್ಲಿ ಮತ್ತು ಅಳಿಯ ಸಂತಾನದ ಕಟ್ಟುನಿಟ್ಟಿನ ಮೊಗವೀರ ಕುಟುಂಬ ಬಹಳ ಕಡಿಮೆಯಾಗಿದೆ. ಈ ಹಿನ್ನೆಲೆಯಲ್ಲಿ ಗುರಿಕಾರ ಪದ್ಧತಿಯು ಕ್ಷೀಣವಾಗುತ್ತಿದೆ.

**ಮೊಗವೀರ ಧರ್ಮ ದತ್ತಿ ಸಂಘಟನೆಗಳು**

**ಮೊಗವೀರ ಧಾರ್ಮಿಕ ಕ್ಷೇತ್ರ**

ಮೊಗವೀರ ಸಮುದಾಯದ ಆರು ದೇವಸ್ಥಾನಗಳು, ಇಪ್ಪತ್ತೈದು ಮೂಲಸ್ಥಾನಗಳು, ಸುಮಾರು ಅರವತ್ತು ಭಜನಾ ಮಂದಿರಗಳು ಮತ್ತು ಸುಮಾರು 30 ದೈವಸ್ಥಾನಗಳ ಚಿರಾಸ್ತಿ ನಿರ್ಮಾಣಕ್ಕೆ 1980 ರಿಂದ ಆದ ಖರ್ಚನ್ನು ಅಂದಾಜು ಮಾಡಬಹುದು. "ಮೊಗವೀರ ಧಾರ್ಮಿಕ ಆಚರಣೆಗಳು" ಎಂಬ ಅಧ್ಯಾಯದಲ್ಲಿ ಮೊಗವೀರ ಧಾರ್ಮಿಕ ಸ್ಥಳಗಳ ವಿವರವಿದೆ. ಇದಲ್ಲದೆ ಮೊಗವೀರ ಧಾರ್ಮಿಕ ಸ್ಥಳಗಳಲ್ಲಿ ಆಗುವ ವಾರ್ಷಿಕ ಪುನರಾವರ್ತಕ ಖರ್ಚು ಕೂಡಾ ಅಂದಾಜು ಮಾಡಬಹುದು. ಈ ಎರಡು ಅಂದಾಜು ಪಟ್ಟಿಯ ಮೊತ್ತ ಮೊಗವೀರ ಸಮಾಜದ ಧಾರ್ಮಿಕ ಸ್ಥಳಗಳಲ್ಲಾಗುವ ಖರ್ಚು ಎಂದು ತಿಳಿಯಬಹುದು.

**ಮೊಗವೀರರ ಶಿಕ್ಷಣ ಕ್ಷೇತ್ರ**

ಇದೇ ರೀತಿ ಮೊಗವೀರ ಸಮಾಜದ ಶಿಕ್ಷಣ ಕ್ಷೇತ್ರದಲ್ಲಿ ಶಾಲೆ ಇತ್ಯಾದಿ ವಿದ್ಯಾಮಂದಿರಗಳ ಸ್ಥಿರಾಸ್ತಿ ನಿರ್ಮಾಣಕ್ಕೆ ಮತ್ತು ವಿದ್ಯಾಸಂಸ್ಥೆಗಳನ್ನು ನಡೆಸಿಕೊಂಡು ಬರಲು ತಗಲುವ ಖರ್ಚನ್ನು ಕೂಡಾ ಅಂದಾಜು ಮಾಡಬಹುದು. ಮೊಗವೀರರ ವಿದ್ಯಾಮಂದಿರಗಳ ವಿವರಕ್ಕಾಗಿ "ಮೊಗವೀರ ಸಂಘಟನೆಗಳು" ಎಂಬ ಅಧ್ಯಾಯವನ್ನು ನೋಡಿದರೆ ಒಳ್ಳೆಯದು.

**ಸಂಪೂರ್ಣ ದತ್ತಾಂಶ ಲಭ್ಯವಿಲ್ಲ**

ಮೊಗವೀರ ಸಮಾಜದ ಧಾರ್ಮಿಕ ಕ್ಷೇತ್ರ ಮತ್ತು ವಿದ್ಯಾ ಕ್ಷೇತ್ರದ ಸ್ಥಿರಾಸ್ತಿ ಮತ್ತು ವಾರ್ಷಿಕ ಪುನರಾವರ್ತಕ ಖರ್ಚುಗಳ ಎಲ್ಲಾ ದತ್ತಾಂಶ ಸಂಗ್ರಹವಾಗಿಲ್ಲ. ಆದರೆ ಸಂಗ್ರಹಿಸಿದ ಪ್ರಾಥಮಿಕ ದತ್ತಾಂಶಗಳ ಆಧಾರದಿಂದ ಧಾರ್ಮಿಕ ಕ್ಷೇತ್ರದಲ್ಲಿ ಶಿಕ್ಷಣ ಕ್ಷೇತ್ರಕ್ಕಿಂತ ಹಲವು ಪಾಲು ಹೆಚ್ಚಿಗೆ ಖರ್ಚಾಗುತ್ತಿದೆ ಎಂದು ತಿಳಿದು ಬರುತ್ತಿದೆ. ಅಲ್ಲದೆ ಧಾರ್ಮಿಕ ಕ್ಷೇತ್ರದಲ್ಲಿ ಸುಮಾರು ನೂರು ಸ್ಥಳಗಳಲ್ಲಿ ಮತ್ತು ವಿದ್ಯಾಕ್ಷೇತ್ರದಲ್ಲಿ ಸುಮಾರು ಹದಿನೈದು ಕಡೆ ಸ್ಥಿರಾಸ್ತಿಗಾಗಿ ಖರ್ಚಾಗಿದೆ ಎಂದು ತಿಳಿದು ಬಂದಿದೆ. ಕನಿಷ್ಟ ದತ್ತಾಂಶಗಳ

ಆಧಾರದಿಂದ ಮಾಡಿದ ವಿಶ್ಲೇಷಣೆ ಶತ ಪ್ರತಿಶತ ಸರಿಯಾಗದಿರಬಹುದು. ಆದರೆ ಮೊಗವೀರರು ಧಾರ್ಮಿಕ ಕ್ಷೇತ್ರದಲ್ಲಿ ವ್ಯಾಪಕವಾಗಿ ಖರ್ಚು ಮಾಡುತ್ತಿದ್ದಾರೆ ಮತ್ತು ಶಿಕ್ಷಣ ಕ್ಷೇತ್ರದಲ್ಲಾಗುವ ಖರ್ಚು ಬಹಳ ಕಡಿಮೆ ಎಂದು ಹೇಳಲು ಸಾಕಷ್ಟು ಆಧಾರವಿದೆ. ಕಟ್ಟ ಕಡೆಗೆ ಶಿಕ್ಷಣ ಕ್ಷೇತ್ರದಲ್ಲಿ ಮೊಗವೀರ ಸಮಾಜದ ಬಡ ವಿದ್ಯಾರ್ಥಿಗಳಿಗೆ ಸಿಗುವ ಸಹಾಯ ಧನವನ್ನು ಹೆಚ್ಚಿಸುವ ಅಗತ್ಯ ಕಂಡು ಬರುತ್ತಿದೆ.

**ಮೊಗವೀರ ವಿದ್ಯಾರ್ಥಿನಿಲಯ ಮತ್ತು ಯುವ ಜನರ ವಸತಿ ಗೃಹ**

ಪದವಿ ಕಾಲೇಜುಗಳಲ್ಲಿ ಮತ್ತು ತಾಂತ್ರಿಕ ವಿದ್ಯಾಲಯಗಳ ಅಧ್ಯಯನದ ಸಮಯ ಮೊಗವೀರ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ನಿಲಯದ ಅಭಾವ ಮನದಟ್ಟಾಗುತ್ತಿದೆ. ಇದಲ್ಲದೆ ವಿದ್ಯಾವಂತ ಮೊಗವೀರ ಯುವ ಜನರು ನಗರಗಳಲ್ಲಿ ಮೊದಲ ಬಾರಿ ಕೆಲಸಕ್ಕೆ ಸೇರುವಾಗ ಅವರಿಗೆ ವಸತಿಯ ಅಭಾವದಿಂದ ಕೆಲಸಕ್ಕೆ ಸೇರುವುದಕ್ಕೆ ಸಾಧ್ಯವಾಗುವುದಿಲ್ಲ. ಈ ಎರಡು ಸಮಸ್ಯೆಗಳನ್ನು ಮೊಗವೀರ ವಿದ್ಯಾರ್ಥಿ ನಿಲಯ/ಮೊಗವೀರ ಯುವಜನರಿಗಾಗಿ ವಸತಿ ಗೃಹಗಳನ್ನು ನಿರ್ಮಿಸುವ ಮೂಲಕ ಪರಿಹರಿಸಬಹುದು. ಕರ್ನಾಟಕ ರಾಜ್ಯದಲ್ಲಿ ಉಡುಪಿ, ಮಂಗಳೂರು, ಹುಬ್ಬಳ್ಳಿ, ಧಾರವಾಡ, ಬೆಂಗಳೂರು ನಗರಗಳಲ್ಲಿ ಮತ್ತು ಮಹಾರಾಷ್ಟ್ರದಲ್ಲಿ ನವಿ ಮುಂಬಾಯಿ, ಥಾನೆ ಮತ್ತು ಪೂಣೆಯಲ್ಲಿ ಇಂತಹ ವಿದ್ಯಾರ್ಥಿ ನಿಲಯ/ಯುವಜನರಿಗೆ ವಸತಿ ಗೃಹಗಳನ್ನು ಸ್ಥಾಪಿಸಬಹುದು. ಮೊಗವೀರ ಸಮಾಜದಲ್ಲಿ ಈವರೆಗೆ ವಿದ್ಯಾರ್ಥಿ ನಿಲಯ ಮತ್ತು ಯುವಜನರಿಗೆ ವಸತಿ ಗೃಹಗಳನ್ನು ಸ್ಥಾಪಿಸುವ ಬಗ್ಗೆ ಆಸಕ್ತಿ ತೋರಿಸಿಲ್ಲವೆಂದು ಹೇಳಿದರೆ ತಪ್ಪಾಗಲಾರದು.